ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಫೆಬ್ರವರಿ ೯, ೨೦೧೨ (ಮಾಘ ೨೦, ಶಕ ವರ್ಷ ೧೯೩೩)	ಸಂಚಿಕೆ ೬

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ ಕೊಪ್ಪಳ.

ಪ್ರಕರಣ ಸಂ:ಕಾಅಕೊ:ಕಾನಪ:ಮಪ್ರ – 91/2011. ದಿನಾಂಕ:– 29–11–2011

ಅರ್ಜಿದಾರರು:

1) ಶ್ರೀಮತಿ: ರುದ್ರಮ್ಮ ಗಂಡ ಬೈಲುವದ್ದಿಗೇರಿ ಚೌಡಪ್ಪ, ವಾಸ: ಗಿಣಿಗೇರಾ, ತಾ: ಜಿ: ಕೊಪ್ಪಳ.

ಪ್ರತಿವಾದಿಗಳು

1) ಶ್ರೀ .ಎ.ಜಿ. ಶಿವಕುಮಾರ್ ತಂದೆ ಜಿ ಬಸಪ್ಪ, ವಾಹನ ಮಾಲೀಕರು, ನಂ:ಕೆಎ:35/ಎ:589, ಸಾ: ತೋರಣಗಲ್ಲು ರೇಲ್ವೆ ಸ್ಟೇಶನ್ ಹತ್ತಿರ, ತೋರಣಗಲ್ ಪೋಸ್ಟ್, ತಾ: ಸಂಡೂರು, ಜಿಲ್ಲೆ ಬಳ್ಳಾರಿ.
2) ಡಿವಿಜನಲ್ ಮ್ಯಾನೇಜರ್, ಮೆ// ಓರಿಯಂಟಲ್ ಇನ್ಸೂರನ್ಸ್ ಕಂಪನಿ ಲಿಮಿಟೆಡ್, ಹೊಸಪೇಟೆ

–:: ಪ್ರಕಟಣೆ ::–

ಸಾರ್ವಜನಿಕರಿಗೆ ಮತ್ತು ಸಂಬಂಧ ಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ: ವಿರೇಶ್ ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ: 09/10/2009 (ಪಿ.ಎಂ.ರಿಪೋರ್ಟ್‌ನಂತೆ) ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ: ಹೊಂದಿರುತ್ತಾರೆ ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ: ವಿರೇಶ್ ಇವರ ವಾರಸುದಾರರಾದ 1) ಶ್ರೀಮತಿ ರುದ್ರಮ್ಮ ಗಂಡ ಬೈಲುವದ್ದಗೇರಿ ಚೌಡಪ್ಪ ವಾಸ:ಗಿಣಿಗೇರಿ ತಾ:ಜಿ: ಕೊಪ್ಪಳ ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ: ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಪಿ.ಮುಸಿಯಪ್ಪ

ಪಿ.ಆರ್. 1291 ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಕೊಪ್ಪಳ ಜಿಲ್ಲೆ ಕೊಪ್ಪಳ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,, ಬೆಂಗಳೂರು ನಗರ ಜಿಲ್ಲೆ ಇವರ ಕಛೇರಿ ನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560 003

ಕ್ರ.ಸಂ.ಡಿಆರ್‌ಬಿ–ಎನ್/ ಎಸ್1/ಆರ್‌ಟಿಐ/ 153 /2011–12, ದಿನಾಂಕ: 09/09/2011

ಪ್ರಕಟಣೆ

ವಿಷಯ:– ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1)(ಬಿ) ಪ್ರಕಾರ ಇಲಾಖಾ ಕೈಪಿಡಿ ಪ್ರಕಟಣೆ (ಕೇಂದ್ರ ಕಾಯ್ದೆ ನಂ. 22/2005)

ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್)(ಸಿ)ರಲ್ಲಿ ವ್ಯಾಖ್ಯಾನಿಸಿರುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾದ ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ಕಛೇರಿಯಿಂದ ಸಾರ್ವಜನಿಕ ಸಾಮಾನ್ಯ ಮಾಹಿತಿಗಾಗಿ

ಸದರಿ ಕಾಯ್ದೆಯ ಕಲಂ 4(1)(ಬಿ)ರಡಿಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಕಛೇರಿಯ ಕೈಪಿಡಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಡಿ. ಪಾಂಡುರಂಗಪ್ಪ,
ಸಾರ್ವಜನಿಕ ಮಾಹಿತಿ ಅಧಿಕಾರಿ. ಸಹಕಾರ ಸಂಘಗಳ
ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,, ಬೆಂಗಳೂರು ನಗರ ಜಿಲ್ಲೆ ರವರಕಛೇರಿ

ನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003

ಕ್ರ.ಸಂ.ಡಿಆರ್‌ಬಿ-ಎನ್/ ಎಸ್1/ಆರ್‌ಟಿಐ/ 153 /2011-12, ದಿನಾಂಕ: 09/09/2011

ಮಾಹಿತಿ ಹಕ್ಕು ಅಧಿನಿಯಮ 2005ರ

(ಕೇಂದ್ರೀಯ ಕಾಯ್ದೆ)

ಕಲಂ 4(1)(ಬಿ)ನ ಅಡಿಯಲ್ಲಿ ಪ್ರಕಟಿಸಿರುವ ಕೈಪಿಡಿ

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,, ಬೆಂಗಳೂರು ನಗರ ಜಿಲ್ಲೆ ರವರಕಛೇರಿ

ನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003

ಕ್ರ.ಸಂ.ಡಿಆರ್‌ಬಿ1/ ಎಸ್1/ಆರ್‌ಟಿಐ/ 153 /2011-12, ದಿನಾಂಕ: 09/09/2011

ಅಧಿಸೂಚನೆ

4(1)(1)ಅ ಸಹಕಾರ ಇಲಾಖೆಯ ಜಿಲ್ಲಾ ಕಛೇರಿಯ ರಚನೆ ಕಾರ್ಯಗಳು, ಕರ್ತವ್ಯಗಳು

01. ಸಹಕಾರ ಇಲಾಖೆಯು ಕರ್ನಾಟಕ ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಒಂದಾಗಿದೆ. ಸಹಕಾರ ಇಲಾಖೆಯು ಸರ್ವವ್ಯಾಪಿಯಾಗಿದ್ದು, ರಾಜ್ಯದ ಆರ್ಥಿಕ ಬೆಳವಣಿಗೆಗೆ ಅದ್ವಿತೀಯ ಕಾಣಿಕೆ ಸಲ್ಲಿಸುತ್ತಿದೆ. ಸಹಕಾರ ಇಲಾಖೆಯು ಬೆಂಗಳೂರು ನಗರ ಜಿಲ್ಲೆ,ಉತ್ತರ ವಲಯದ ವ್ಯಾಪ್ತಿಯಲ್ಲಿ ಸಹಕಾರ ಚಳುವಳಿಯ ಬೀಜಬಿತ್ತಿ , ಸಹಕಾರ ಸಂಘಗಳ ಸ್ಥಾಪನೆ, ಅವುಗಳ ಬೆಳವಣಿಗೆ, ಪ್ರಗತಿ, ಅಭಿವೃದ್ಧಿಗೆ ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡುತ್ತಿದೆ. ಸಣ್ಣ, ಅತಿ ಸಣ್ಣ ರೈತರು , ಕುಶಲಕರ್ಮಿಗಳು ,ಕೃಷಿ ಕಾರ್ಮಿಕರು, ನೇಕಾರರು , ಮೀನುಗಾರರು , ಪರಿಶಿಷ್ಟ ಜಾತಿ: ಪಂಗಡ ಹಿಂದುಳಿದ ವರ್ಗ, ಮಹಿಳೆಯರು, ಕೂಲಿ ಕಾರ್ಮಿಕರು, ನಾಗರೀಕರು, ಇವರುಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ಸಂಘಗಳ ಮೂಲಕ ಅವಿರತವಾಗಿ ಶ್ರಮಿಸುತ್ತಿದೆ. ಕಛೇರಿಯಿಂದ ಕೇವಲ ನಿಯಂತ್ರಣ ಕಾರ್ಯಗಳನ್ನಷ್ಟೇ ನಿರ್ವಹಿಸದೇ, ಸಲಹೆ ಸೂಚನೆ, ಅಭಿಪ್ರಾಯಗಳನ್ನು ನೀಡಿ, ಜಿಲ್ಲೆಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ತನ್ನ ಗುರಿಯನ್ನಾಗಿಸಿಕೊಂಡಿದೆ. ಈ ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸಿದೆ.

ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯಲ್ಲಿರುವ ವಿವಿಧ ರೀತಿಯ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯವನ್ನು ನೀಡುವುದರ ಜೊತೆಗೆ ತಾಂತ್ರಿಕ ಮಾರ್ಗದರ್ಶನವನ್ನು ಸಹ ನೀಡುತ್ತಿದೆ. ಈ ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯ ದ ವ್ಯಾಪ್ತಿಯಲ್ಲಿರುವ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ, ಆಡಳಿತಾತ್ಮಕ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಸಮಷ್ಟಿದೃಷ್ಟಿಯಿಂದ ಈ ಕಛೇರಿಯ ಕೆಲಸ ಕಾರ್ಯಗಳೆಂದರೆ:

1. ಸಹಕಾರ ಸಂಘಗಳ ನೋಂದಣಿ
2. ಸಹಕಾರ ಸಂಘಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆ
3. ಸಲಹೆ ಮತ್ತು ಮಾರ್ಗದರ್ಶನ
4. ಆಡಳಿತ ಮಂಡಳಿಗಳ ಚುನಾವಣಾ ಕಾರ್ಯಗಳು
5. ವ್ಯಾಜ್ಯ:ದಾವೆಗಳ ಇತ್ಯರ್ಥಪಡಿಸುವಿಕೆ
6. ಸಹಕಾರ ಸಂಘಗಳ ಏಳ್ಗೆಗೆ ಸರ್ಕಾರದ ವತಿಯಿಂದ ಕೊಡಮಾಡುವ ಆರ್ಥಿಕ ನೆರವು - ಇತ್ಯಾದಿ

ಜಿಲ್ಲೆಯಲ್ಲಿನ ಸಹಕಾರ ಸಂಘಗಳು ಸಮರ್ಥ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಈ ತನ್ಮೂಲಕ ಸಹಕಾರ ಸದಸ್ಯರುಗಳ ಅಭಿವೃದ್ಧಿಗೆ ಉತ್ತಮ ಪರಿಸರವನ್ನು ನಿರ್ಮಿಸುವ ಆಶಯ ಈ ಕಛೇರಿಯದ್ದಾಗಿರುತ್ತದೆ. ಸಹಕಾರ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳನ್ನು ಸಂಘಟಿಸಿ ಸಹಕಾರ ಚಳುವಳಿಗೆ ಭದ್ರಬುನಾದಿಯನ್ನು ನಿರ್ಮಿಸಿ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಶ್ರಮಿಸುತ್ತಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ ಸಇ/302/ಎಸಸೇ/2010 ದಿನಾಂಕ: 30-03-2011 ರನ್ವಯ ದಿನಾಂಕ: 01-04-2011 ರಿಂದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯಾಗಿ ಸಂಘಗಳ ನೋಂದಣಿ ಮಾಡುವುದು ಕಾಲಿಕವಾಗಿ ಸಲ್ಲಿಸಲ್ಪಡುವ ಲೆಕ್ಕಪತ್ರಗಳನ್ನು ದಾಖಲು ಮಾಡುವುದು , ದಾಖಲೆಗಳನ್ನು ನಿರ್ವಹಿಸುವುದು ಮತ್ತು ಸಂಸ್ಥೆಗಳ ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

02. ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,ಬೆಂಗಳೂರು ನಗರ ಜಿಲ್ಲೆ ಕಛೇರಿಯಲ್ಲಿ ಅನುಷ್ಠಾನ:ಜಾರಿಗೊಳಿಸುವ ಶಾಸನಗಳು

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ನಿಯಮಗಳು

3. ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961 ಹಾಗೂ ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965.
4. ಗಿರವಿದಾರರ ಕಾಯ್ದೆ 1961, ಗಿರವಿದಾರರ ನಿಯಮಗಳು 1966.
5. ಚೀಟಿನಿಧಿ ಕಾಯ್ದೆ 1982 ಹಾಗೂ ಚೀಟಿ ನಿಧಿ ನಿಯಮಾವಳಿಗಳು 1983
6. ಕರ್ನಾಟಕ ದುಬಾರಿ ಬಡ್ಡಿ ನಿಷೇದ ಕಾಯ್ದೆ 2004
7. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಮತ್ತು ನಿಯಮಗಳು 1961

03. ಸಹಕಾರ ಇಲಾಖೆಯು ತನ್ನ ಗುರಿಸಾಧನೆಗೆ ನಿರ್ವಹಿಸುತ್ತಿರುವ ಪ್ರಮುಖ ಕರ್ತವ್ಯಗಳು

1. ಸಹಕಾರ ತತ್ವಗಳ ಪರಿವಿಡಿಯಲ್ಲಿ , ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ರೀತ್ಯಾ ವಿವಿಧ ಸ್ವರೂಪದ ಸಹಕಾರ ಸಂಘಗಳ ಸಂಘಟನೆ ಮತ್ತು ನೋಂದಣಿ ಮಾಡುವುದು
2. ಸಹಕಾರ ಕಾಯ್ದೆ ನಿಯಮಗಳ ರೀತ್ಯಾ ವಿವಿಧ ಆಡಳಿತಾತ್ಮಕ, ಶಾಸನಾತ್ಮಕ ಅರೆ ನ್ಯಾಯಿಕ ಕಾರ್ಯಗಳ ನಿರ್ವಹಣೆ.
3. ವಿವಿಧ ರೀತಿಯ ಸಹಕಾರ ಸಂಘಗಳಿಗೆ ವಾರ್ಷಿಕ ಯೋಜನೆಗಳಡಿಯಲ್ಲಿ ಪಾಲು ಬಂಡವಾಳ , ಸಾಲ ಸಹಾಯಧನ, ಅನುದಾನ ರೂಪದಲ್ಲಿ, ಸರ್ಕಾರದ ಪರವಾಗಿ ಧನಸಹಾಯ ನೀಡುವಿಕೆಗೆ ಕ್ರಮ
4. ದೀನ, ದಲಿತರು ,ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ:ಪಂಗಡದ ಜನರು ಸಹಕಾರ ಚಳುವಳಿಯ ಮುಖ್ಯವಾಹಿನಿಗೆ ತರಲು ಅವಶ್ಯ ಕ್ರಮ ಕೈಗೊಳ್ಳುವುದು
5. ಸಹಕಾರ ಸಂಘಗಳ ಕಾಯ್ದೆಯಲ್ಲಿರುವ ಅವಕಾಶಗಳ ರೀತ್ಯಾ ಸಹಕಾರ ಸಂಘಗಳ ಪರಿವೀಕ್ಷಣೆ , ಮೇಲ್ವಿಚಾರಣೆ ತಪ್ಪು ಎಸಗುವ ಸಹಕಾರ ಸಂಘಗಳ ವಿರುದ್ಧ ಕ್ರಮ ಜರುಗಿಸುವುದು.
6. ಸಹಕಾರ ಸಂಘಗಳ ಕಾಯ್ದೆಯ ಅವಕಾಶಗಳ ರೀತ್ಯಾ ವಿನಿಮಯದ (ರೆಗ್ಯುಲೇಷನ್) ಕಾರ್ಯಗಳ ನಿರ್ವಹಣೆ
7. ಸಹಕಾರ ಸಂಘಗಳ ಸಿಬ್ಬಂದಿ, ಸದಸ್ಯರ ನಡುವಿನ ವ್ಯಾಜ್ಯ,ಆಡಳಿತ ಮಂಡಳಿಯ ವಿರುದ್ಧ ದಾವೆಗಳನ್ನು ನ್ಯಾಯಿಕ ಕಲಾಪಗಳ ಮೂಲಕ ಇತ್ಯರ್ಥಪಡಿಸುವುದು.
8. ಸಹಕಾರ ಕಾಯ್ದೆಯಡಿ ನೀಡಲ್ಪಟ್ಟ ತೀರ್ಪು, ಐತೀರ್ಪು, ಆದೇಶ, ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು
9. ತೃಪ್ತಿಕರವಾಗಿ ಕಾರ್ಯನಿರ್ವಹಣೆ,ಸಹಕಾರಿ ಧ್ಯೇಯೋದ್ದೇಶಗಳನ್ನು ಜಾರಿಗೊಳಿಸುವಲ್ಲಿ ವಿಫಲವಾದ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವುದು.
10. ಸಹಕಾರ ಕಾಯ್ದೆ, ನಿಯಮಗಳ ಉಲ್ಲಂಘನೆಯಾದ ಸಂದರ್ಭದಲ್ಲಿ ಇಲಾಖಾಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವುದು ಹಾಗೂ ಆಡಳಿತ ಮಂಡಳಿಯ ಸ್ಥಾನದಲ್ಲಿ ಉನ್ನತಾಧಿಕಾರಿಗಳ ಆದೇಶದ ರೀತ್ಯಾ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
11. ಸಹಕಾರ ಸಂಘಗಳಿಗೆ ಹಾಗೂ ಸಹಕಾರಿ ಸದಸ್ಯರುಗಳಿಗೆ ಇಲಾಖಾಧಿಕಾರಿಗಳು ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಯಂತೆ, (ಫ್ರೆಂಡ್, ಫಿಲಾಸಫರ್ ,ಅಂಡ್ ಗೈಡ್) ಸಲಹೆ, ಸೂಚನೆಗಳನ್ನು ನೀಡುವುದು.
12. ಸಹಕಾರ ರಂಗದ ಅಭಿವೃದ್ಧಿಗೆ ಸರ್ಕಾರದವು ಮಾಡಿರುವ ನೀತಿ, ಯೋಜನೆ ಇತ್ಯಾದಿಗಳಿಗೆ ಸಹಾಯ ಸಹಕಾರ ನೀಡಿ, ಕಾರ್ಯಗತಗೊಳಿಸುವಲ್ಲಿ ಕ್ರಮ.
13. ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪ್ರಾಸಂಗಿಕವಾಗಿ ಅಗತ್ಯವಿರುವ , ಅವಶ್ಯವಿರುವ ಇತರೆ ಎಲ್ಲಾ ಕಾರ್ಯಗಳನ್ನು ಕರ್ತವ್ಯಗಳ ನಿರ್ವಹಿಸುವುದು
14. ಸರ್ಕಾರದ ಅತ್ಯಂತ ಮುಖ್ಯ ಯೋಜನೆಯಾದ ಯಶಸ್ವಿನಿ ರೈತರ ಆರೋಗ್ಯ ವಿಮಾ ರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸಿ ರೈತ ಆರೋಗ್ಯವನ್ನು ಕಾಪಾಡುವುದು.
15. ಉತ್ತರ ವಲಯ ವ್ಯಾಪ್ತಿಯಲ್ಲಿ ಸಂಘಗಳ ನೋಂದಣಿ, ಸಲ್ಲಿಸಲ್ಪಟ್ಟ ಲೆಕ್ಕಪತ್ರಗಳನ್ನು ದಾಖಲುಮಾಡುವುದು, ಉಪನಿಯಮಗಳ ತಿದ್ದುಪಡಿ ಅನುಮೋದನೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸುವುದು.

04. ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯಲ್ಲಿ ಪ್ರಸಕ್ತ ಅವಧಿಯವರೆಗೆ ಒಟ್ಟು 576 ಸಹಕಾರ ಸಂಘಗಳಿವೆ ವಿವರ ಈ ಕೆಳಕಂಡಂತಿವೆ.

"ಎಲ್ಲರಿಗಾಗಿ ಒಬ್ಬರು ಒಬ್ಬರಿಗಾಗಿ ಎಲ್ಲರೂ" ಎಂಬ ಮಹತ್ವಾಕಾಂಕ್ಷೆಯ ಧ್ಯೇಯೋದ್ದೇಶಗಳೊಂದಿಗೆ ಸಹಕಾರ ಚಳುವಳಿಯನ್ನು ಜಿಲ್ಲೆಯ ಜನತೆಯಲ್ಲಿ ಹಾಸು ಹೊಕ್ಕಾಗಿಸಲು ಕಛೇರಿಯು ಅವಿರತವಾಗಿ ಶ್ರಮಿಸುತ್ತಿದೆ.

ಕ್ರ.. ಸಂ.	ವಿವಿಧ ಸಹಕಾರ ಸಂಘಗಳು	ದಿನಾಂಕ:31–3–2011ಕ್ಕೆ ಇದ್ದಂತೆ ಸಹಕಾರ ಸಂಘಗಳ ಸಂಖ್ಯೆ
01	ರಾಜ್ಯಮಟ್ಟದ ಸಹಕಾರ ಸಂಘಗಳು	04
02	ಪ್ರಾಥಮಿಕ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್	01

ಕ್ರ.. ಸಂ.	ವಿವಿಧ ಸಹಕಾರ ಸಂಘಗಳು	ದಿನಾಂಕ:31–3–2011ಕ್ಕೆ ಇದ್ದಂತೆ ಸಹಕಾರ ಸಂಘಗಳ ಸಂಖ್ಯೆ
03	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು	07
04	ಹಾಲು ಉತ್ಪಾದಕರ ಸಹಕಾರ ಸಂಘಗಳು	38
05	ಕೃಷಿಯೇತರ ಪತ್ತಿನ ಸಹಕಾರ ಸಂಘಗಳು	163
06	ಗೃಹ ನಿರ್ಮಾಣ ಸಹಕಾರ ಸಂಘಗಳು	146
07	ಲೈವ್ ಸ್ಟಾಕ್ ಸಹಕಾರ ಸಂಘಗಳು	04
08	ಪಟ್ಟಣ ಸಹಕಾರ ಬ್ಯಾಂಕುಗಳು	16
09	ನೌಕರರ ಪತ್ತಿನ ಸಹಕಾರ ಸಂಘಗಳು	51
10	ಕೂಲಿಕಾರರ ಪತ್ತಿನ ಸಹಕಾರ ಸಂಘಗಳು	2
11	ಮಹಿಳೆಯರ ವಿವಿದ್ದೋದ್ದೇಶ ಸಹಕಾರ ಸಂಘಗಳು	27
12	ವಿವಿದೊದ್ದೇಶ ಸಹಕಾರ ಸಂಘಗಳು	8
13	ಬಳಕೆದಾರರ ಸಹಕಾರ ಸಂಘಗಳು	64
14	ದರ್ಜಿಗಳ ಸಹಕಾರ ಸಂಘಗಳು	2
15	ಮಡಿವಾಳಗಾರರ ಸಹಕಾರ ಸಂಘಗಳು	3
16	ಮುದ್ರಣಾಲಯದ ಸಹಕಾರ ಸಂಘಗಳು	2
17	ನೀರು ಬಳಕೆದಾರರ ಸಹಕಾರ ಸಂಘಗಳು	2
18	ಮೀನುಗಾರರ ಸಹಕಾರ ಸಂಘಗಳು	3
19	ನೇಕಾರರ ಸಹಕಾರ ಸಂಘಗಳು	14
20	ಸಗಟು ಮಾರಾಟ ಸಹಕಾರ ಸಂಘಗಳು	3
21	ಕೈಗಾರಿಕಾ ಸಹಕಾರ ಸಂಘಗಳು	12
22	ಇತರೆ ಸಹಕಾರ ಸಂಘಗಳು	03
	ಒಟ್ಟು	576

ಒಟ್ಟು 576 ಸಹಕಾರ ಸಂಘಗಳು ಇದ್ದು, ಬೆಂಗಳೂರು ನಗರದ ಜನಜೀವನದಲ್ಲಿ ಸಹಕಾರ ಚಳುವಳೀಯು ಹಾಸುಹೊಕ್ಕಾಗಿರುತ್ತದೆ.

05. ಜಿಲ್ಲೆಯಲ್ಲಿ ಸಹಕಾರ ಇಲಾಖಾ ಕಚೇರಿಗಳ ಸಂರಚನೆ, ಆಡಳಿತದ ವಿವಿಧ ಹಂತಗಳು

01. ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
02. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯ ವೃತ್ತ, ಬೆಂಗಳೂರು

05.01. ಈ ಮೇಲ್ಕಂಡ ಅದಿಕಾರಿಗಳಲ್ಲದೇ ಈ ಕೆಳಕಂಡ ವೃಂದದ ಸಿಬ್ಬಂದಿ ವರ್ಗವು ಸಹ ಕಾರ್ಯನಿರ್ವಹಿಸುತ್ತಿರುತ್ತಾರೆ.

1. ಸಹಕಾರ ಅಭಿವೃದ್ಧಿ ಅಧಿಕಾರಿಗಳು
2. ಅಧೀಕ್ಷಕರು
3. ಮಾರಾಟಾಧಿಕಾರಿ
4. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
5. ಸಹಕಾರ ಸಂಘಗಳ ನಿರೀಕ್ಷಕರು
6. ಪ್ರಥಮ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು,
8. ಹಿರಿಯ ಬೆರಳಚ್ಚುಗಾರರು
9. ದ್ವಿತೀಯ ದರ್ಜೆ ಸಹಾಯಕರು
10. ಬೆರಳಚ್ಚುಗಾರರು
11. ವಾಹನ ಚಾಲಕರು
12. ಡಿ ದರ್ಜೆ ನೌಕರರು: ಜಾರಿಗಾರರು

ಒಟ್ಟಾರೆ ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯ ಇಲಾಖಾ ಕಛೇರಿಗಳಲ್ಲಿ ತಹಲ್‌ವರೆವಿಗೂ ಮಂಜೂರಾಗಿರುವ ಹುದ್ದೆಗಳು ಹಾಗೂ ಕಾರ್ಯನಿರತ ಸಿಬ್ಬಂದಿ ಸಂಖ್ಯೆ , ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯ ನಿರತ ಹುದ್ದೆ	ಖಾಲಿಹುದ್ದೆ
ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ , ಬೆಂಗಳೂರು ಇವರ ಕಛೇರಿ				
01	ಸಹಕಾರ ಸಂಘಗಳ ಉಪನಿಬಂಧಕರು	01	01	–
02	ಸಹಕಾರ ಅಭಿವೃದ್ಧಿ ಅಧಿಕಾರಿ	02	02	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	02	02	–
05	ಸಹಕಾರ ಸಂಘಗಳ ನಿರೀಕ್ಷಕರು	03	02	01
06	ಪ್ರಥಮ ದರ್ಜೆ ಸಹಾಯಕರು	03	03	–
07	ಶೀಘ್ರಲಿಪಿಗಾರರು	01	–	01
08	ಹಿರಿಯ ಬೆರಳಚ್ಚುಗಾರರು	01	01	–
09	ದ್ವಿತಿಯ ದರ್ಜೆ ಸಹಾಯಕರು	01	01	–
10	ವಾಹನ ಚಾಲಕರು	01	01	–
11	ಡಿ. ದರ್ಜೆ ನೌಕರರು	02	–	02
	ಒಟ್ಟು	**18**	**14**	**04**
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ ರವರ ಕಛೇರಿ, ಬೆಂಗಳೂರು				
01	ಸಹಕಾರ ಸಂಘಗಳ ಸಹಾಯಕ ನಿಬಂಧಕರು	01	01	–
02	ಮಾರಾಟಾಧಿಕಾರಿ	01	01	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ನಿರೀಕ್ಷಕರು	04	03	01
05	ದ್ವಿತಿಯ ದರ್ಜೆ ಸಹಾಯಕರು	03	02	01
06	ಬೆರಳಚ್ಚುಗಾರರು	01	01	–
07	ವಾಹನಚಾಲಕರು	01	–	01
08	ಜಾರಿಗಾರರು	01	01	–
09	ಡಿ ದರ್ಜೆ ನೌಕರರು	03	01	2
	ಒಟ್ಟು	**16**	**11**	**05**

ಈ ಮೇಲಿನಂತೆ ಸಹಕಾರ ಇಲಾಖೆಯ ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಕಛೇರಿಗಳ ಸಂರಚನೆಯ ನಕ್ಷೆಯು ಸಮಷ್ಟಿಯಾಗಿ ಆಡಳಿತಾತ್ಮಕ ರಚನೆಯನ್ನು ಸ್ಪಷ್ಟಪಡಿಸುತ್ತದೆ.

6. ಜಿಲ್ಲೆಯಲ್ಲಿ ಒಟ್ಟು 2 ಹಂತಗಳಲ್ಲಿ ಸಂಘಟಿತವಾಗಿದೆ. ಈ ಹಂತಗಳು ಯಾವುವೆಂದರೆ ಜಿಲ್ಲಾ ಮಟ್ಟ, ಉಪವಿಭಾಗೀಯ ಮಟ್ಟ, ಇಲಾಖೆಯ ಆಡಳಿತಾತ್ಮಕ ಕಾರ್ಯಗಳನ್ನು ಜಾರಿಗೆತರುವ ಹಾಗೂ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

6.01 ಸಹಕಾರ ಸಂಘಗಳ ಉಪನಿಬಂದಕರು ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದು, ಇವರು ಲೇವಾದೇವಿ, ಗಿರವಿ ಹಾಗೂ ಚೀಟಿನಿಧಿಗಳ ನಿಬಂಧಕರು, ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳೂ ಸಹ ಆಗಿರುತ್ತಾರೆ. ಇವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಲೇವಾದೇವಿಗಾರರ ಕಾಯ್ದೆ, ಗಿರವಿದಾರರ ಕಾಯ್ದೆ, ಚೀಟಿನಿಧಿಗಳ ಕಾಯ್ದೆ ಮತ್ತು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಗಳ ಶಾಸನಾತ್ಮಕ ಅಧಿಕಾರಗಳನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಸಹಕಾರ ಸಂಘಗಳಲ್ಲಿನ ಆಡಳಿತ ಮಂಡಳಿಗಳಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

6.02. ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ ಇವರ ಅಧೀನದಲ್ಲಿ ಬೆಂಗಳೂರು ಉತ್ತರ ವಲಯ ವೃತ್ತಕ್ಕೆ ಉಪವಿಭಾಗಿಯ ಮಟ್ಟದ ಅಧಿಕಾರಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇದ್ದು, ಇವರಿಗೆ ಸರ್ಕಾರದ ಆದೇಶದನ್ವಯ ಅಧಿಕಾರ ಪ್ರತ್ಯಾಯೋಜನೆಯಾಗಿರುತ್ತದೆ. ಇವರ ಅಧಿಕಾರ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ಮೇಲೆ ಹಾಗೂ ಗಿರವಿ ,ಹಣಕಾಸು ಚೀಟಿ ಸಂಸ್ಥೆಗಳ ಶಾಸನಾತ್ಮಕ ಹಾಗೂ ಆಡಳಿತಾತ್ಮಕ ನಿಯಂತ್ರಣ ಹೊಂದಿರುತ್ತಾರೆ. ಅದೇ ರೀತಿ ಸಹಕಾರ ಸಂಘಗಳ ಸಂಯೋಜನೆ, ಸಮಾಪನೆ, ಉಪನಿಯಮಗಳ ತಿದ್ದುಪಡಿ, ಪರಿವೀಕ್ಷಣೆ, ನಿರೀಕ್ಷಣೆಗಳ ಜೊತೆಗೆ ಅರೆ ನ್ಯಾಯಕಲಾಪ ಹಾಗೂ ಶಾಸನಗಳು ನೀಡಿರುವ ಆದೇಶದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

6.03 ರಾಜ್ಯ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ,ಜಿಲ್ಲಾ ಪಂಚಾಯಿತಿಯ ಯೋಜನೆಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯ,ಸಹಕಾರ ಸಂಘಗಳ ಉಪನಿಬಂಧಕರು ಜಿಲ್ಲಾ ಪಂಚಾಯತ್ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಾರೆ. ಉಪವಿಭಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ ರವರು ರಾಜ್ಯ ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಯೋಜನೆಗಳ ಅನುಷ್ಠಾನದ ಹೊಣೆಯನ್ನು ಹೊಂದಿರುತ್ತಾರೆ. ಅಲ್ಲದೇ ಇಲಾಖಾ ಮುಖ್ಯಸ್ಥರು ಹಾಗೂ ಪ್ರಾಂತೀಯ ಅಧಿಕಾರಿಗಳ ಅಧೀನದಲ್ಲಿ ಜಿಲ್ಲಾ, ಉಪವಿಭಾಗದ ಹಂತದಲ್ಲಿ ಕ್ಷೇತ್ರೀಯ ಸಿಬ್ಬಂದಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

6.04 ಈ ಸಂರಚನೆಯು ಇಲಾಖೆಯ ಧ್ಯೇಯೋದ್ದೇಶಗಳನ್ನು ಗುರಿಸಾಧಿಸಲು ಮಾರ್ಗೋಪಾಯವಾಗಿದೆ. ಇಲಾಖೆಯ ಜಿಲ್ಲಾಡಳಿತ ಯಂತ್ರವು ತಂಡದ ಸ್ವರೂಪದಲ್ಲಿ ಕಾರ್ಯನಿರ್ವಹಿಸುತ್ತದೆ. ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ, ಇಲಾಖೆಯ ಧ್ಯೇಯ–ಉದ್ದೇಶಗಳನ್ನು ಜಾರಿಗೊಳಿಸಲು ಕೆಲಸಗಳನ್ನು ವಿಂಗಡಣೆ ಮಾಡಿಕೊಂಡು ತಂಡದೋಪಾದಿಯಲ್ಲಿ ನಿರ್ವಹಿಸುತ್ತಿದೆ.

ಕಛೇರಿಯ ಪ್ರತಿಯೊಬ್ಬ ಸದಸ್ಯರು(ನೌಕರರು–ಅಧಿಕಾರಿಗಳು) ತನ್ನ ನಿರ್ಧಿಷ್ಟ ಪಾತ್ರವನ್ನು ಅರಿತು ತಮ್ಮ ತಮ್ಮ ಕರ್ತವ್ಯಗಳು, ವಹಿಸಿರುವ ಜವಾಬ್ದಾರಿಗಳು, ಅಧಿಕಾರ ಪತ್ರಾಯೋಜನೆಯ ರೀತ್ಯಾ ಪರಸ್ಪರ ಪೂರಕವಾಗಿ ನಿರ್ವಹಿಸುವ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

6.05. ಜಿಲ್ಲಾ ಮುಖ್ಯಸ್ಥರಾದ ಸಹಕಾರ ಸಂಘಗಳ ಉಪನಿಬಂಧಕರು ಇಲಾಖಾ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ ಇಲಾಖೆಯ ಸಿಬ್ಬಂದಿಯೊಂದಿಗೆ ಸಮನ್ವಯತೆಯನ್ನು ಸಾಧಿಸಿ ಸುಲಲಿತ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ.

7. ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಅವರ ಕಛೇರಿಯ ಅಧಿಕಾರಿ, ನೌಕರರ ಅಧಿಕಾರಿ ಮತ್ತು ಕರ್ತವ್ಯಗಳು :

ಇಲಾಖೆಯ ಸಂರಚನೆಯ ನಕ್ಷೆಯಲ್ಲಿ ಅಧಿಕಾರದ ಶ್ರೇಣಿಕೃತ ವ್ಯವಸ್ಥೆಯನ್ನು ವೀಕ್ಷಿಸಬಹುದು. ಆ ಪ್ರಕಾರ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಅಧಿಕಾರಿಗಳು ನೌಕರರ ಆಡಳಿತಾತ್ಮಕ ಸ್ಥಾನ ಮತ್ತು ಅಧಿಕಾರ ಮತ್ತು ಕರ್ತವ್ಯಗಳನ್ನು ಈ ಕೆಳಕಂಡಂತೆ ಇರುತ್ತದೆ.

7.01 ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ,ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಮಟ್ಟದ ಎ ವರ್ಗದ ಅಧಿಕಾರಿಗಳಾಗಿದ್ದು, ಇವರು ಇಲಾಖಾ ಮುಖ್ಯಸ್ಥರಾದ ಸಹಕಾರ ಸಂಘಗಳ ನಿಬಂಧಕರು, ಹಾಗೂ ಕೇಂದ್ರ ಕಛೇರಿಯ ಉನ್ನತ ಅಧಿಕಾರಿಗಳು ಮತ್ತು ಪ್ರಾಂತ ಮಟ್ಟದ ಅಧಿಕಾರಿಗಳಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ, ಸರ್ಕಾರದ ಸಹಕಾರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವುದು, ಈ ಮೇಲಿನ ಕಾಯ್ದೆಗಳಲ್ಲಿ ನಿರ್ಧಿಷ್ಟಪಡಿಸಿರುವ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಣೆ ಮಾಡುತ್ತಾರೆ.

7.02 ಸಹಕಾರ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರವನ್ನು ಹೊಂದಿರುತ್ತಾರೆ. ಇವರು ಆಡಳಿತಾತ್ಮಕ,ಶಾಸನಾತ್ಮಕ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅಭಿವೃದ್ಧಿಗೆ ಅಗತ್ಯವಿರುವ ಪೂರಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಇವರು ಈ ಕೆಳಕಂಡ ಕಾಯ್ದೆಗಳಲ್ಲಿ ಹಂಚಿಕೆ ಮಾಡಿರುವ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಮತ್ತು ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ನಿಯಮಾವಳಿಗಳು
3 ಕರ್ನಾಟಕ ಲೇವಾದೇವಿ ಕಾಯ್ದೆ 1961 ಮತ್ತು ಕರ್ನಾಟಕ ಲೇವಾದೇವಿ ನಿಯಮಾವಳಿಗಳು 1965.
4. ಕರ್ನಾಟಕ ಗಿರವಿದಾರರ ಕಾಯ್ದೆ 1961 ಮತ್ತು ಕರ್ನಾಟಕ ಗಿರವಿ ನಿಯಮಗಳು 1966
5. ಚೀಟಿ ನಿಧಿ ಕಾಯ್ದೆ 1982 ಮತ್ತು ಚೀಟಿ ನಿಧಿ ನಿಯಮಗಳು 1983
6. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಹಾಗೂ ನಿಯಮಗಳು 1961.
7. ಜಿಲ್ಲೆಯ ಎಲ್ಲಾ ನೌಕರರ ಸೇವಾ ವಿಷಯಗಳಾದ, ಬಡ್ತಿ, ರಜೆ, ನಿವೃತ್ತಿ, ನಿಯಂತ್ರಣ, ನಿರ್ದೇಶನ ಹಾಗೂ ಶಿಸ್ತು ಕ್ರಮದ ಬಗ್ಗೆ ಪ್ರತ್ಯಾಯೋಜಿತವಾದ ಅಧಿಕಾರದಂತೆ ಕ್ರಮ.
8. ಜಿಲ್ಲೆಯ ಸಹಕಾರ ಇಲಾಖೆಯ ಸಾಮಾನ್ಯ ಆಡಳಿತದ ಮೇಲ್ವಿಚಾರಣೆ
9 ವಿವಿಧ ಯೋಜನೆಗಳ ಅನುಷ್ಠಾನ, ಇಲಾಖಾ ಮುಖ್ಯಸ್ಥರು ನೀಡುವ ಅನುಧಾನಗಳನ್ನು ಸಮರ್ಪಕವಾಗಿ ಸದ್ಬಳಕೆ ಬಗ್ಗೆ, ನೀಡಿದ ಭೌತಿಕ ಗುರಿಗೆ ಅನುಗುಣವಾಗಿ ಸಾಧನೆಗೆ ಕ್ರಮ .

10. ಜಿಲ್ಲೆಯ ಅಂಕಿ ಅಂಶಗಳ ನಿರ್ವಹಣೆ, ಸರ್ಕಾರವು ಸಹಕಾರ ಸಂಘಗಳಿಗೆ ನೀಡುವ ಷೇರು, ಸಾಲ, ಸಹಾಯದನದ ಸದ್ಬಳಕೆ ಬಗ್ಗೆ ಮೇಲ್ವಿಚಾರಣೆ ಹಾಗೂ ರೇಡಿಮೆಬಲ್ ಷೇರು ಮತ್ತು ಸರ್ಕಾರಿ ಸಾಲದ ವಸೂಲಾತಿಯ ಮೇಲ್ವಿಚಾರಣೆ.

11. ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಒಳಪಟ್ಟಿರುವ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ವಿಧದ ಸಹಕಾರ ಸಂಘಗಳ ಮೇಲ್ವಿಚಾರಣೆ, ವ್ಯಾಜ್ಯಗಳ ವಿಚಾರಣೆ ಹಾಗೂ ಇತ್ಯರ್ಥ.

12. ತಾಲ್ಲೂಕು ಮಟ್ಟ ಹಾಗೂ ಬೆಂಗಳೂರು ಉತ್ತರ ವಲಯ ವ್ಯಾಪ್ತಿಗೆ ಒಳಪಟ್ಟಿರುವ ಅಧಿಕಾರ ಪ್ರತ್ಯಾಯೋಜಿತ ವಿವಿಧ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಕಾಯ್ದೆಯಡಿ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳ ನೋಂದಣಿ ಕಾರ್ಯಗಳು, ಮತ್ತು ಸಂಬಂಧಪಟ್ಟ ಸಂಘಗಳ ಉಪನಿಯಮಗಳ ತಿದ್ದುಪಡಿ ನೋಂದಣಿ ಕಾರ್ಯ.

13 ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ವಿಮಾ ಯೋಜನೆಯ ಅನುಷ್ಠಾನ ಹಾಗೂ ಆ ಮೂಲಕ ರೈತ ಫಲಾನುಭವಿ ಸದಸ್ಯರುಗಳಿಗೆ ಪ್ರಾಯೋಜಕತ್ವದ ಬಗ್ಗೆ ಮೇಲ್ವಿಚಾರಣೆ .

7.03 ಇವರ ಅಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಆಡಳಿತಾತ್ಮಕ ಕಾರ್ಯನಿರ್ವಹಿಸುವ ಕಾರ್ಯರಚನೆಯ ವಿವರಗಳು

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಸೌಹಾರ್ದಸಹಕಾರಿಗಳ ಉಪನಿಬಂಧಕರು , ಸಂಘಗಳ ಜಿಲ್ಲಾ ನೋಂದಣಾಧಿಕಾರಿ,ಲೇವಾದೇವಿಗಾರರ ನಿಬಂಧಕರು, ಗಿರವಿದಾರರ ನಿಬಂಧಕರು, ಚೀಟಿ ನಿಧಿಗಳ ನಿಬಂಧಕರು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿಗಾರರ ಸಹಾಯಕ ನಿಬಂಧಕರು ,ಗಿರವಿದಾರರ ಸಹಾಯಕ ನಿಬಂಧಕರು, ಸೌಹಾರ್ದ ಸಹಕಾರಿಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು

ಸಹಕಾರ ಅಭಿವೃದ್ಧಿ ಅಧಿಕಾರಿಗಳು
ಅಧೀಕ್ಷಕರು
ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
ಸಹಕಾರ ಸಂಘಗಳ ನಿರೀಕ್ಷಕರು
ವಿಷಯ ನಿರ್ವಾಹಕರು

7.04 ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಕಛೇರಿಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ವರ್ಗದವರುಗಳಿರುತ್ತಾರೆ.

1. ಅಧೀಕ್ಷಕರು
2 ಸಹಕಾರ ಅಭಿವೃದ್ಧಿ ಅಧಿಕಾರಿಗಳು
3. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
4. ಸಹಕಾರ ಸಂಘಗಳ ನಿರೀಕ್ಷಕರು
5. ಪ್ರಥಮ ದರ್ಜೆ ಸಹಾಯಕರು
6. ದ್ವಿತೀಯ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು
8. ಹಿರಿಯ ಬೆರಳಚ್ಚುಗಾರರು
9. ವಾಹನ ಚಾಲಕರು ಹಾಗೂ ಡಿ ದರ್ಜೆ ನೌಕರರು

7.04.01 ಈ ಸಿಬ್ಬಂದಿಗಳ ವಿವರ ,ಕಾರ್ಯನಿರ್ವಹಣೆ, ವಿವರ ಅನುಬಂಧ-1,ಅನುಬಂಧ-2(ಎ) ರಂತೆ ಇವೆ

7.05 ಕ್ಷೇತ್ರೀಯ ಮಟ್ಟದಲ್ಲಿ

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ, ವೃತ್ತ ,ಬೆಂಗಳೂರು ಹಾಗೂ ಲೇವಾದೇವಿಗಾರರ ಸಹಾಯಕ ನಿಬಂಧಕರು, ಗಿರವಿದಾರರ ಸಹಾಯಕ ನಿಬಂಧಕರು, ಚೀಟಿ ನಿಧಿಗಳ ಸಹಾಯಕ ನಿಬಂಧಕರು ಮತ್ತು ಸಹಕಾರಿಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು

7.06 ಈ ಕಛೇರಿಗಳಲ್ಲಿ ಆಡಳಿತಾತ್ಮಕ ಕಾರ್ಯರಚನೆ ಈ ಕೆಳಕಂಡಂತಿದೆ.

(ಅನುಬಂಧ-2ಬಿ)

(1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು ಉತ್ತರ ವಲಯ ವೃತ್ತ , ಬೆಂಗಳೂರು.

1. ಅಧೀಕ್ಷಕರು
2 ಮಾರಾಟಾಧಿಕಾರಿ(ಸರ್ಕಾರಿ)
3. ಸಹಕಾರ ಸಂಘಗಳ ನಿರೀಕ್ಷಕರು
4. ದ್ವಿತೀಯ ದರ್ಜೆ ಸಹಾಯಕರು

5 ಬೆರಳಚ್ಚುಗಾರರು

6 ವಾಹನ ಚಾಲಕರು

7. ಜಾರಿಗಾರರು "ಡಿ" ದರ್ಜೆ ನೌಕರರು

8. ಮೇಲ್ವಿಚಾರಣೆಯ ಅಂಶಗಳು ಮತ್ತು ಜವಾಬ್ದಾರಿಯು ಸೇರಿದಂತೆ ತೀರ್ಮಾನ ಕೈಗೊಳ್ಳುವ ನಡವಳಿಯಲ್ಲಿ ಅನುಸರಿಸುವ ವಿಧಾನ:

8.01.(1) ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಆದೇಶ ಸಂ.ಸಿಓ/139/ಸಿಎಲ್ಎಂ/2010 ದಿನಾಂಕ: 17–02–2011ರ ಕ್ರಮ ಸಂಖ್ಯೆ V ರಲ್ಲಿ ದತ್ತವಾದ ಅಧಿಕಾರದನ್ವಯ

(i) ತಾಲ್ಲೂಕು ಮಟ್ಟಕ್ಕೆ ಕಡಿಮೆಯಲ್ಲದ ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳು ಕಲಂ 14,14ಬಿ, 30,72,72ಎ,73,74,75,98ಪಿ(2) &118 ನಿಯಮ 18,22(1)(ಎ),24(2)(ಎ)&33.

(ii) ತಾಲ್ಲೂಕು ಮಟ್ಟ ಮತ್ತು ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳು(ಸಕ್ಕರೆ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳನ್ನು ಹೊರತುಪಡಿಸಿ) ಕಲಂ 6,7,8 10,12,14,14ಬಿ,16,17,27,28,28ಎ(5), 29ಸಿ,29ಎಫ್(7)&(8),29ಜಿ(6),31,31ಎ,58(ಇ),63(4ಎ),(5)&(7),64,65,65ಎ,67,68,69,70,70ಎ,71,103,104,105ಎ,110ಎ,111,113,117,125,&128ಬಿ, ನಿಯಮಗಳು 3,6,14(1),14ಬಿ,14ಡಿ, 14ಇ,23,26,31,50,52,53,& 56 ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು (ಅಮಾನತ್ ಸಹಕಾರ ಬ್ಯಾಂಕ್,ಬೆಂಗಳೂರು ಹೊರತುಪಡಿಸಿ) ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಕೇಂದ್ರ ಕಛೇರಿಯಿಂದ ನೋಂದಣಿಯಾದ ಪಟ್ಟಣ ಸಹಕಾರ ಬ್ಯಾಂಕುಗಳು ಕಲಂ 69 ,70,70ಎ,71,103 ಮತ್ತು 117 ನಿಯಮಗಳು 31 ಮತ್ತು 56 .

ದತ್ತವಾದ ಅಧಿಕಾರದನ್ವಯ ತೀರ್ಮಾನ ಕೈಗೊಳ್ಳುವುದು ,ಕ್ಷೇತ್ರ ಸಿಬ್ಬಂದಿಗಳಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ,ಹಿರಿಯ ನಿರೀಕ್ಷಕರು, ನಿರೀಕ್ಷಕರು, ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆ ಸಹಾಯಕರು, ಸಹಾಯಕರಾಗಿರುತ್ತಾರೆ. ಪತ್ರಗಳ ವಿಲೇವಾರಿಯು ವಿಷಯ ನಿರ್ವಾಹಕರಿಂದ ಪ್ರಾರಂಭವಾಗಿ, ಉಪ ನಿಬಂಧಕರ ತೀರ್ಮಾನಕ್ಕೆ ಸಲ್ಲಿಸಲ್ಪಡುತ್ತದೆ. ಕಡತಗಳ ನಿರ್ವಹಣೆ ಮಾಡುವ ಎಲ್ಲಾ ಸಿಬ್ಬಂದಿಗಳು ಅದರ ಚಾಲನೆಯಲ್ಲಿನ ಕ್ರಮಬದ್ಧತೆ ಮತ್ತು ಜವಾಬ್ದಾರಿಯಿಂದ ಹೊರಬರುವ ಫಲಿತಾಂಶವು ನಿರ್ವಹಿಸುವ ಕರ್ತವ್ಯಕ್ಕೆ ಅನುಗುಣವಾಗಿರುತ್ತದೆ.

8.02 ಉಪವಿಭಾಗದ ಸಹಾಯಕ ನಿಬಂಧಕರು, ಉತ್ತರ ವಲಯವೃತ್ತ ಬೆಂಗಳೂರು ಇವರ ಕಛೇರಿಯಲ್ಲಿ ಇಲಾಖೆಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಜವಾಬ್ದಾರರಾಗಿರುತ್ತಾರೆ. ಮತ್ತು ಇವರು ಅವರ ಕಛೇರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಹಾಯಕ ನಿಬಂಧಕರು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ. ಜಿಲ್ಲಾ ಮಟ್ಟದ ಕಛೇರಿಯಂತೆಯೇ ಇವರ ಕಾರ್ಯನಿರ್ವಹಣೆಗೆ ಕ್ಷೇತ್ರ ಸಿಬ್ಬಂದಿಗಳು ಹಾಗೂ ಲಿಪಿಕ ಸಿಬ್ಬಂದಿಗಳು ಹಾಗೂ ಮಾರಾಟಾಧಿಕಾರಿ (ಸರ್ಕಾರಿ) ಇವರು ಸಹಾಯಕರಾಗಿರುತ್ತಾರೆ. ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತದ ಹಂತದಲ್ಲಿ ಕರ್ತವ್ಯಗಳನ್ನು ನಿರ್ವಹಿಸಲು ಕ್ಷೇತ್ರ ಸಿಬ್ಬಂದಿಗಳು ಮತ್ತು ಕಛೇರಿ ಸಿಬ್ಬಂದಿಗಳು ಸಹಾಯಕರಾಗಿರುತ್ತಾರೆ. ವಿಷಯ ನಿರ್ವಾಹಕರು ಮತ್ತು ಮೇಲ್ವಿಚಾರಕ ಸಿಬ್ಬಂದಿಗಳು ಅವರುಗಳು ಕರ್ತವ್ಯ ನಿರ್ವಹಣೆಯ ಫಲಿತಾಂಶಕ್ಕೆ ಜವಾಬ್ದಾರರಾಗಿರುತ್ತಾರೆ. ಮತ್ತು ಮೇಲಧಿಕಾರಿಗಳಿಗೂ ಇದಕ್ಕೆ ಸಂಬಂಧಪಟ್ಟಂತೆ ಜವಾಬ್ದಾರಿ ಹೊಂದಿರುತ್ತಾರೆ.

9.01 ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಕಛೇರಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸಲು ರೂಪಿತವಾಗಿರುವ ಮಾರ್ಗಸೂಚಿಗಳು:

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಇಲಾಖೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ವಿವಿಧ ಹಂತಗಳನ್ನು ರೂಪಿಸಿದೆ.

ಸಾಮಾನ್ಯವಾಗಿ ವ್ಯವಹಾರದ ಜರೂರು ವಿಲೇವಾರಿಗೆ ಅಂದರೆ ಕಾಲವಿಳಂಭಕ್ಕೆ ಯಾವುದೇ ಅವಕಾಶ ನೀಡದೇ ಆದ್ಯತೆಯ ಮೇಲೆ ಪತ್ರಗಳನ್ನು, ಕಡತಗಳನ್ನು ಮಂಡಿಸುವುದು, ತುರ್ತು ಮತ್ತು ಮುಖ್ಯವಾದ ಆದ್ಯತೆಯ ವಿಷಯವನ್ನು ಸಾಮಾನ್ಯವಾಗಿ ಅಂದಂದೇ ನಿರ್ವಹಿಸಲು ಅಗತ್ಯವಾದ ಕ್ರಮಗಳನ್ನು ಅನುಸರಿಸಲಾಗುವುದು.

9.02. ಪತ್ರಗಳ ಮತ್ತು ಕಡತಗಳ ವಿಲೇವಾರಿಗೆ, ಕಛೇರಿ ಕಾರ್ಯವಿಧಾನ ಕೈಪಿಡಿಯಲ್ಲಿ ರೂಪಿಸಿದ ಮಾರ್ಗಸೂಚಿಯಂತೆ ಪರಿಣಾಮಕಾರಿಯಾಗಿ ಪುನರ್ ವಿಲೋಕನ ಮತ್ತು ಶೀಘ್ರ ವಿಲೇವಾರಿಗೆ ಕಾರ್ಯನಿರ್ವಹಣೆಯನ್ನು ಗುರುತಿಸಲು ಅನುಪಾಲನಾ ಪದ್ದತಿ ಜಾರಿಯಲ್ಲಿದೆ. ಕಛೇರಿಯ ಮಾರ್ಗಸೂಚಿಗಳ ಪ್ರಕಾರ, ಅವರವರ ಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಚುರುಕಾಗಿ ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿರುವುದು ಕಡ್ಡಾಯವಾಗಿದೆ.

9.03. ಉಪನಿಬಂಧಕರು ಅರೆನ್ಯಾಯಕ ಪ್ರಾಧಿಕಾರಿಗಳಾಗಿ ಸಹಕಾರ ಸಂಘಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ, ಹಾಗೂ ಚೀಟಿನಿಧಿ ಕಾಯ್ದೆಯನ್ವಯ ಚೀಟಿಸಂಸ್ಥೆಗಳಲ್ಲಿ ಉದ್ಭವಿಸುವ ಮತ್ತು ದಾವೆಗೆ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನ್ಯಾಯಿಕ ಕಲಾಪದ ಮೂಲಕ ಮತ್ತು ಇತರೆ ಅರೆ ನ್ಯಾಯಿಕ ವಿಷಯಗಳಂತೆ ಇರುವ ಪ್ರಕರಣಗಳನ್ನು ನಿಯಮಾನುಸಾರ ಮತ್ತು ನಿಗಧಿತ ಕ್ರಮಗಳನ್ನು ಅನುಸರಿಸಿ ವಿಲೇವಾರಿ ಮಾಡಲಾಗುವುದು.

9.04. ಉಪನಿಬಂದಕರಿಗೆ ದತ್ತವಾದ ಅಧಿಕಾರವನ್ನು ಚಲಾಯಿಸಲು ಸಂಬಂಧಪಟ್ಟಂತೆ ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳನ್ನು ಮತ್ತು ಕಚೇರಿ ಕಾರ್ಯ ವಿಧಾನ ಕೈಪಿಡಿಯನ್ವಯ ನಿರ್ಧಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಲಾಗುವುದು.

9.05. ನಿರ್ವಹಣೆ , ಜವಾಬ್ದಾರಿ, ಪಾರದರ್ಶಕತೆ ಮತ್ತು ಪರಿಣಾಮಕಾರಿ ಆಡಳಿತ ಇವುಗಳನ್ನು ಇಲಾಖೆಯು ಪ್ರಮುಖ ಮಾರ್ಗಸೂಚಿಗಳಾಗಿದ್ದು, ಇವುಗಳನ್ನು ಕಾನೂನುಬದ್ದವಾಗಿ ನಿಗಧಿಪಡಿಸಿರುವ ಮಾರ್ಗಸೂಚಿಗಳ ಜೊತೆಯಲ್ಲಿ ಅನುಸರಿಸಲಾಗುವುದು.

10.01 ಕಛೇರಿ ಸಿಬ್ಬಂದಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಉಪಯೋಗಿಸುವ ನಿಯಮಗಳು, ನಿಯಂತ್ರಣಗಳು, ಸೂಚನೆಗಳು, ಮ್ಯಾನ್ಯೂಯಲ್ ಮತ್ತು ದಾಖಲೆಗಳು ಅಥವಾ ಅವುಗಳ ನಿಯಂತ್ರಣಗಳು.

ಉಪನಿಬಂಧಕರ ಕಛೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಅಗತ್ಯವಾದ ದಾಖಲೆಗಳನ್ನು ಕೈಪಿಡಿಗಳನ್ನು ನಿರ್ವಹಿಸುತ್ತಿದ್ದಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959.
2. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960
3. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ನಿಯಮಗಳು 2004.
4. ಚೀಟಿ ನಿಧಿ ಕಾಯ್ದೆ, 1982 ಚೀಟಿ ನಿಧಿ(ಕರ್ನಾಟಕ)ನಿಯಮಗಳು 1983
5. ಗಿರವಿದಾರರ ಕಾಯ್ದೆ 1961 ಮತ್ತು ಗಿರವಿದಾರರ ನಿಯಮಗಳು 1966
6. .ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961 ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965
7. ಕರ್ನಾಟಕ ಮೀತಿಮೀರಿದ ಬಡ್ಡಿ ವಿಧಿಸುವುದನ್ನು ನಿಷೇದಿಸುವ ಕಾಯ್ದೆ 2004
8. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960.ಮತ್ತು ನಿಯಮಗಳು 1961.
9. ಇತರೆ.

10.**02 ನಿರ್ವಹಿಸುವ ಇತರೆ ಶಾಸನ ಬದ್ದ ಕಾಯ್ದೆಗಳು, ನಿಯಮಗಳು**

1. ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958
2. ಕರ್ನಾಟಕ ನಾಗರಿಕ (ವೈದ್ಯಕೀಯ ಹಾಜರಾತಿ)_ನಿಯಮಗಳು 1963
3. ಕರ್ನಾಟಕ ನಾಗರಿಕ (ಕಾಲಮಿತಿ ಬಡ್ತಿ) ನಿಯಮಗಳು
4. ಕರ್ನಾಟಕ ಆಯವ್ಯಯ ಕೈಪಿಡಿ
5. ಸಾದಿಲ್ವಾರು ವೆಚ್ಚದ ಕೈಪಿಡಿ
6. ಕರ್ನಾಟಕ ಆರ್ಥಿಕ ಸಂಹಿತೆ ಸಂಪುಟ–1 , ಸಂಪುಟ–2
7. ಕರ್ನಾಟಕ ಖಜಾನೆ ಸಂಹಿತೆ ಸಂಪುಟ–1,2
8. ಕರ್ನಾಟಕ ನಾಗರೀಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ)ನಿಯಮಗಳು
9. ಸಿ.ಆ.ಸು.ಇಲಾಖೆಯು ಪ್ರಕಟಿಸಿರುವ ಸೇವಾ ನಿಯಮಗಳು

10. ಪ್ರಮುಖ ಸರ್ಕಾರಿ ಆದೇಶಗಳು , ಸರ್ಕಾರದ , ಸಿಅಸು ಮತ್ತು ಹಣಕಾಸು ಇಲಾಖೆಯು ಪ್ರಕಟಿತ ಮ್ಯಾನ್ಯಯಲ್

10. ಕರ್ನಾಟಕ ಸರ್ಕಾರಿ ನೌಕರರ ಸಮೂಹ ವಿಮಾ ಯೋಜನೆ ನಿಯಮಗಳು

11. ಕರ್ನಾಟಕ ಸರ್ಕಾರಿ ನೌಕರರ (ಪರೀಕ್ಷಾರ್ಥ ಅವಧಿ)ನಿಯಮಗಳು

12. ಕರ್ನಾಟಕ ನಾಗರೀಕ ಸೇವ (ನಡತೆ) ನಿಯಮಗಳು

13. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲು ಸಹಿ)ನಿಯಮಗಳು

14. ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು .

10.03 ಕಛೇರಿಯಲ್ಲಿ ಕೆಳಕಂಡ ದಾಖಲಾತಿಗಳನ್ನು ನಿರ್ವಹಿಸಲಾಗುತ್ತಿದೆ

1. ಸ್ವೀಕೃತಿ ವಹಿ(ಯಿಂದ ವಹಿ), ರವಾನೆ ವಹಿ (ಗೆ ವಹಿ) ಸ್ಥಳೀಯ ಬಟವಾಡೆ ವಹಿ
2. ಸಿಬ್ಬಂದಿಗಳ ಸೇವಾ ಪುಸ್ತಕಗಳು,
3. ಸಿಬ್ಬಂದಿಗಳ ಸೇವಾ ಪುಸ್ತಕದ ಚಲನಚಲನ ವಹಿ, ಮುಕ್ತಾಯಗೊಂಡ ಸೇವಾ ಪುಸ್ತಕಗಳ ವಹಿ
4. ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ ಪರಿಶೀಲನಾ ವಹಿ
5. ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳ ಪರಿಶೀಲನಾವಹಿ
6. ಸಿಬ್ಬಂದಿಗಳ ಆಸ್ತಿ–ಜವಾಬ್ದಾರಿ ಪರಿಶಿಲನಾ ವಹಿ

7. ಸಾಂದರ್ಭಿಕ ರಜೆ ವಹಿ
8 ನಗದು ಪುಸ್ತಕ , ವೇತನ ಬಟವಾಡೆ ಪುಸ್ತಕ,
9. ಸಾದಿಲ್ವಾರು ವೆಚ್ಚದ ಬಿಲ್ಲುಗಳ ವಹಿ , ಪ್ರಯಾಣ ಭತ್ಯೆ ಬಿಲ್ಲುಗಳ ವಹಿ
10. ಬಿಲ್ಲುಗಳ ನಗದು ಪರಿವರ್ತನೆ ವಹಿ(ಎನ್ ಕ್ಯಾಷ್‌ಮೆಂಟ್ ರಿಜಿಸ್ಟರ್) ಚಕ್ಕುಗಳ ವಹಿ ವಾಹನ ಲಾಗ್ ಪುಸ್ತಕ
11. ವಿಷಯ ವಹಿಗಳು , ವೈಯಕ್ತಿಕ ವಹಿಗಳು
12. ಸಿಬ್ಬಂದಿಗಳ ಚಲನ–ವಲನ ವಹಿ, ಕಛೇರಿ ಆದೇಶದ ವಹಿ
13. ಲೇವಾದೇವಿ/ಗಿರವಿದಾರರ ಪರವಾನಿಗೆ ,ಚೀಟಿ ನಿಧಿ, ಸಂಬಂಧಪಟ್ಟಂತೆವಹಿಗಳು.
14 ದಾಖಲೆಗಳ ವಹಿ ,ಇತ್ಯಾದಿ ಕಛೇರಿಯಲ್ಲಿ ಅವಶ್ಯಕವಾಗಿ ನಿರ್ವಹಿಸಬೇಕಾದ ವಹಿಗಳು

10.04 ನಿರ್ವಹಿಸಲ್ಪಡುವ ಇತರೆ ಕಡತಗಳು/ದಾಖಲೆಗಳು

1. ಸಹಕಾರ ಸಂಘಗಳ ಮತ್ತು ಸಂಘಗಳ ನೋಂದಣಿ ವಹಿ
2. ನೋಂದಣಿಗೆ ಸಂಬಂಧಪಟ್ಟ ಕಡತಗಳು
3. ಮಹಾಸಭೆ ನಡೆಸುವ ಬಗ್ಗೆ ಕಡತಗಳು
4. ಹಣ ದುರುಪಯೋಗ ಪ್ರಕರಣಗಳ ತ:ಖ್ತೆ
5. ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ದತಿ ವಹಿ, ಕಡತಗಳು, ತ:ಖ್ತೆಗಳು
6. ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳ ಕಡತ.
7. ಪರಿವೀಕ್ಷಣೆ, ವಿಚಾರಣೆಗೆ ಆದೇಶಿಸಿರುವ ವಿವರಗಳ ವಹಿ, ಕಡತಗಳು
8. ವಿವಿಧ ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು, ವಹಿಗಳು
9. ಇತರೆ ಮತ್ತು ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು ಮತ್ತು ವಹಿಗಳು ,ದಾಖಲಾತಿಗಳು
10. ಅಧಿಕಾರಿಗಳು ನಡೆಸಿದ ಪರಿವೀಕ್ಷಣಾ ವರದಿಗಳು
11. ಕಾರ್ಯವ್ಯಾಪ್ತಿಯು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವರದಿಗಳು ,ಲೆಕ್ಕಪರಿಶೋಧನಾ ವರದಿಗಳ ಮೇಲೆ ಕಲಂ 68ರ ಪುನರ್ ವಿಲೋಕನ ಆದೇಶಗಳು
12. ಕಛೇರಿ ಸಿಬ್ಬಂದಿಗಳ ರಜೆ, ವೇತನ ಬಡ್ತಿ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನೌಕರರ ವೈಯ್ಯಕ್ತಿಕ ಕಡತಗಳು
13. ಕಡತ ವಿಲೇವಾರಿ ವಹಿ,
14. ಇತರೆ ವಿಷಯಗಳ ಬಗ್ಗೆ ಕಾಲಿಕ ಪ್ರಗತಿ ತ:ಖ್ತೆಗಳು, ಪುನರ್ ವಿಲೋಕನ ಮತ್ತು ಇತರೆ ವ್ಯವಹಾರಿಕ ಕಡತಗಳು
15. ಆಡಳಿತ, ವ್ಯಾಜ್ಯ, ಲೇವಾದೇವಿ/ಗಿರವಿದಾರರ ಪರವಾನಿಗೆ ಸಂಬಂಧಪಟ್ಟಂತೆ ಚೀಟಿ ನಿಧಿ, ಪತ್ತು, ಪತ್ತೇತರ, ಗೃಹ, ಬಳಕೆ ಇತರೆ ಸಹಕಾರ ಸಂಘಗಳ ಬಗ್ಗೆ ಪ್ರಗತಿ, ಕಾರ್ಯನಿರ್ವಹಣೆ ಇತರೆ ವಿಷಯಗಳ ಪತ್ರ ವ್ಯವಹಾರದ ಕಡತಗಳು ಮತ್ತು ಸಂಬಂಧಿಸಿದ ಕಡತಗಳು

10.5 ಕಛೇರಿಯ ನಿಯಂತ್ರಣದಲ್ಲಿ ಹೊಂದಿರುವ ದಾಖಲೆಗಳ ವರ್ಗಗಳ ತ:ಖ್ತೆ

ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ದಾಖಲೆಗಳ ವರ್ಗಗಳ ವಿವರಗಳನ್ನು ಈ ಕೈಪಿಡಿಯ ವಿವರದಂತೆ ನಮೂದಿಸಿದೆ. ಸದರಿ ಪಟ್ಟಿಯಲ್ಲದೆ ಕಛೇರಿ ಕೈಪಿಡಿಯಲ್ಲಿ ನಮೂದಿಸಿರುವಂತೆ ನಿರ್ಧಿಷ್ಟಪಡಿಸಿರುವ ಅಗತ್ಯ ವಹಿಗಳನ್ನು ನಿರ್ವಹಿಸಿರುವುದನ್ನು ಸಹ ನಮೂದಿಸಿದೆ. ನಿರ್ಣಯಗಳಿಗೆ ಸಂಬಂಧಿಸಿದ ದಾಖಲೆಗಳು ಅವುಗಳ ಕಾರ್ಯನಿರ್ವಹಣೆ ಆಡಳಿತಾತ್ಮಕ/ಶಾಸನಬದ್ದ/ ಅರೆ ನ್ಯಾಯಿಕ ರೂಪವಾಗಿರುತ್ತದೆ. ಈ ದಾಖಲೆಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಲಾಗಿದೆ. ಮತ್ತು ಆಡಳಿತ ನಿರ್ವಹಿಸಲ್ಪಟ್ಟಿದೆ.

10.6 ಕಛೇರಿಗೆ ಅರ ನ್ಯಾಯಿಕ ಜವಾಬ್ದಾರಿಯನ್ನು ವಹಿಸಿರುವುದರಿಂದ ಸದರಿ ಕಾರ್ಯನಿರ್ವಹಣೆಗೆ ಸೂಕ್ತ ಮತ್ತು ಅಗತ್ಯ ಶಾಸನಬದ್ಧ ಮಾರ್ಗಸೂಚನೆಗಳನ್ನು ಪಾಲಿಸಲಾಗುತ್ತಿದೆ. ನಿಯಮಗಳು, ನಿಯಂತ್ರಕಗಳು, ಮ್ಯಾನ್ಯುಯಲ್ ಮತ್ತು ಸರ್ಕಾರದ ಅಧಿಸೂಚನೆಗಳ ಮೂಲಕ ಇಲಾಖೆಯ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನವಿದೆ. ಆದಾಗ್ಯೂ ಕಛೇರಿಯ ಕಡ್ಡಾಯವಾಗಿ ಕಾಯ್ದೆ, ನಿಯಮಗಳು ಮತ್ತು ನಿಯಂತ್ರಕಗಳನ್ನು ಅನುಸರಿಸಿರುವುದರಿಂದ ಸಾರ್ವಜನಿಕರೊಂದಿಗೆ ಸಮಾಲೋಚಿಸುವ ಪದ್ದತಿ ಇರುವುದಿಲ್ಲ.

10.7. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇಬ್ಬರು ಅಥವಾ ಹೆಚ್ಚು ಸದಸ್ಯರುಗಳನ್ನು ಅದರ ರಚನೆಯ ಭಾಗವಾಗಿ ಹೊಂದಿರುವುದು ಅಥವಾ ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಮತ್ತು ಅಂತಹ ಮಂಡಳಿಗಳು , ಪರಿಷತ್ತುಗಳ ಸಮಿತಿಗಳು ಮತ್ತು ಇತರೆ ಅಂಗ ರಚನೆಗಳ ಸಭೆಗಳಲ್ಲಿ ಸಾರ್ವಜನಿಕರಿಗೆ ಅವಕಾಶವಿದೆಯೇ? ಅಥವಾ ಅಂತಹ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿದೆಯೇ?

ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಇಲಾಖಾ ಕಛೇರಿಗಳಲ್ಲಿ ಅಂತಹ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇರುವುದಿಲ್ಲ.

11. ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಪಟ್ಟಿ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಯಾದಿಯನ್ನು ಈ ಕೈಪಿಡಿಯೊಂದಿಗೆ ಲಗತ್ತಿಸಿದೆ ಅನುಬಂಧ ' 2ಎ' ರಂತಿದೆ.

12. ಕಛೇರಿಯ ಪ್ರತಿ ಅಧಿಕಾರಿ/ನೌಕರರ ಮಾಸಿಕ ಸಂಭಾವನೆ , ವಿವರಗಳು ಅದರ ನಿಯಂತ್ರಣದಲ್ಲಿನ ಅವಕಾಶದಂತೆ ಪರಿಹಾರದ ಪದ್ದತಿಯಲ್ಲಿನ ಸಂಭಾವನೆಯಾ ಸೇರಿದಂತೆ:–

ಸರ್ಕಾರವು ನಿಗಧಿಪಡಿಸಿರುವಂತೆ, ಅಧಿಕಾರಿಗಳು/ ನೌಕರರು ಮಾಸಿಕ ಸ್ವೀಕರಿಸುವ ಸಂಭಾವನೆ ವಿವರಗಳನ್ನು ಒಳಗೊಂಡಿರುವ ತ:ಖ್ತೆಯನ್ನು ಈ ಕೈಪಿಡಿಯ ಜೊತೆಗೆ ಲಗತ್ತಿಸಿರುವ ಅನುಬಂಧ 3 ರಲ್ಲಿದೆ. ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರಿ ಆದೇಶಗಳು/ ಅಧಿಸೂಚನೆಗಳನ್ವಯ ಇರುವ ಸಂಭಾವನೆಯನ್ನು ಈ ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿದ್ದಾರೆ.

13. ಪ್ರತಿಯೊಂದು ಏಜೆನ್ಸಿಗೆ ಆಯವ್ಯಯ ಹಂಚಿಕೆ ಎಲ್ಲಾ ಯೋಜನೆಗಳ ವಿವರಗಳನ್ನು ನಮೂದಿಸುವುದು, ಉದ್ದೇಶಿತ ಖರ್ಚುಗಳು ಮತ್ತು ವಿತರಣೆ ಬಗ್ಗೆ ವರದಿ

2010–11ನೇ ಸಾಲಿನ ಆಯವ್ಯಯದ ಹಂಚಿಕೆ ಮತ್ತು ಖರ್ಚಿನ ವಿವರಗಳ ತ:ಖ್ತೆಗಳು ಲಗತ್ತಿಸಿರುವ ಅನುಬಂಧ 4 ರಂತಿದೆ.

14. ಸಹಾಯಧನದ ಕಾರ್ಯಕ್ರಮಗಳ ಅನುಷ್ಟಾನದ ವಿಧಾನ, ಹಂಚಿಕೆ ಯಾದ ಮೊಬಲಗು ಸೇರಿದಂತೆ ಮತ್ತು ಅಂತಹ ಕಾರ್ಯಕ್ರಮದ ಫಲಾನುಭವಿಗಳ ವಿವರಗಳು;–

ವಿವಿಧ ಯೋಜನೆಗಳು, ಕಾರ್ಯಕ್ರಮಗಳು, ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧ 5ಎ ಮತ್ತು 5ಬಿ ರಲ್ಲಿ ವಿವರಿಸಿದಂತಿದೆ.

14.01 ಹಾಗೂ ಸಹಾಯಧನ ಹಂಚಿಕೆ ಮಾಡಿರುವ ಮೊಬಲಗು, ಸರ್ಕಾರ ಇಲಾಖಾ ಮುಖ್ಯಸ್ಥರು, ಹಾಗೂ ಜಿಲ್ಲಾ ಪಂಚಾಯತ್ ಮಂಜೂರು ಮಾಡುತ್ತದೆ. ಅದನ್ನು ಡ್ರಾ ಮಾಡಿ ಫಲಾನುಭವಿ ಸಹಕಾರ ಸಂಘದ ಖಾತೆಗಳ ಮೂಲಕ ಜಮಾ ನೀಡಲಾಗುತ್ತಿದೆ.

15. ರಿಯಾಯಿತಿಗಳನ್ನು ಸ್ವೀಕರಿಸಿರುವ ವಿವರಗಳು, ಅನುಮತಿಗಳು ಅಥವಾ ಮಂಜೂರು ಮಾಡಿರುವುದು.

15.01 ಸಂಬಂಧಿಸಿದ ಯೋಜನೆಯ ಕಾರ್ಯಕ್ರಮದಲ್ಲಿ ನಿರ್ಧಿಷ್ಟಪಡಿಸಿರುವ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಸ್ವೀಕರಿಸಿರುವವರು ಸಹಕಾರ ಸಂಘಗಳು/ ಸಹಕಾರ ರೈತ ಸದಸ್ಯರುಗಳು ಫಲಾನುಭವಿಗಳಾಗಿರುತ್ತಾರೆ. ಆದರೆ ಯಾವುದೇ ಅನುಮತಿ ನೀಡುವ ಯೋಜನೆಗಳಿರುವುದಿಲ್ಲ. ಇಲಾಖೆಯ ಕ್ರಿಯಾ ಯೋಜನೆಯ ಕಾರ್ಯಕ್ರಮದಲ್ಲಿ ಆರ್ಥಿಕ ನೆರವನ್ನು, ಷೇರು ಬಂಡವಾಳ ಸಾಲ ಮತ್ತು ಸಹಾಯಧನದ ರೂಪದಲ್ಲಿ ಅರ್ಹ ಸಹಕಾರ ಸಂಘಗಳಿಗೆ ನೀಡಲಾಗುತ್ತಿದೆ.

15.02 ಯೋಜನೆ: ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯವರು ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಆರ್ಥಿಕ ನೆರವು ನೀಡಲಾಗುತ್ತಿದೆ.

15.03 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು, ಸಾಲ ಸೌಲಭ್ಯ ಪಡೆದಿರುವ ರೈತರುಗಳು ಸರ್ಕಾರವು ಕಾಲಕಾಲಕ್ಕೆ ಮಂಜೂರು ಮಾಡಿದಂತೆ ಬಡ್ಡಿ ಸಹಾಯಧನದ ರಿಯಾಯ್ತಿ ಪಡೆಯಲಿದ್ದಾರೆ. ರೈತರು , ಕೃಷಿ ಕಾರ್ಮಿಕರು ಇತರೆ ವರ್ಗದ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಲ್ಲಿ ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ವಿಮಾ ಯೋಜನೆಯಡಿಯಲ್ಲಿ ಲಭ್ಯವಾಗುವ ಸೌಲಭ್ಯವನ್ನು ಪಡೆಯಲು ಅರ್ಹರಿದ್ದಾರೆ.

16. ಗ್ರಂಥಾಲಯದ ಕಾರ್ಯ ನಿರ್ವಹಣೆಯ ಅವಧಿಯು ಸೇರಿದಂತೆ ಮಾಹಿತಿ ಪಡೆಯಲು ನಾಗರೀಕರಿಗೆ ಸಿಗುವ ಸವಲತ್ತುಗಳ ವಿವರಗಳು ಮತ್ತು ಓದುವ ಕೊಠಡಿ ಸಾರ್ವಜನಿಕ ಉಪಯೋಗಕ್ಕೆ ನಿರ್ವಹಿಸಿದ್ದಲ್ಲಿ;–

16.01 ಕಛೇರಿಯಲ್ಲಿ ಗ್ರಂಥಾಲಯದ ಓದುವ ಕೊಠಡಿ ನಿರ್ವಹಿಸಿರುವುದಿಲ್ಲ. ಯಾವುದೇ ಸಾರ್ವಜನಿಕರು ಯಾವುದೇ ಮಾಹಿತಿಯನ್ನು ಪಡೆಯಲು ಕಾರ್ಯ ನಿರತ ದಿನಗಳಲ್ಲಿ ಕಛೇರಿಯ ಮುಖ್ಯಸ್ಥರನ್ನು ಅಥವಾ ಈ ಉದ್ದೇಶಕ್ಕೆ ನಿಯತಗೊಂಡ ಸಹಾಯಕ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಸಾರ್ವಜನಿಕರಿಗೆ ಅಗತ್ಯವಾದ ವಿಷಯಗಳನ್ನು ನಿರ್ವಹಿಸಲ್ಪಡುವ ಶಾಖೆಗಳ ಮಾಹಿತಿಗಳ ಬಗ್ಗೆ ಮಾರ್ಗದರ್ಶನ ನೀಡಲಾಗುವುದು ಮತ್ತು ಯಾವುದೇ ಅಗತ್ಯ ದಾಖಲೆ/ ಮಾಹಿತಿಗಳಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ದಾಖಲೆ .ಮಾಹಿತಿಗಳನ್ನು ನಿಗದಿತ ಅವಧಿಯೊಳಗೆ ಒದಗಿಸಲು ಕ್ರಮವಿಡಲಾಗುವುದು. ಸಾರ್ವಜನಿಕರು, ಸಂದರ್ಶನಕ್ಕೆ ನಿಗಧಿಯಾಗಿರುವ ಸಮಯದಲ್ಲಿ ಕಾರ್ಯನಿರತ ದಿನಗಳಲ್ಲಿ ಅಧಿಕಾರಿಗಳು ಅಧಿಕೃತವಾಗಿ ಕೇಂದ್ರ ಸ್ಥಾನದಲ್ಲಿರುವಾಗ ಮುಕ್ತವಾಗಿ ಅಧಿಕಾರಿಗಳನ್ನು ಭೇಟಿ ಮಾಡಬಹುದು.

17. ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಇವರ ಕಛೇರಿಯಲ್ಲಿ ಮಾಹಿತಿ ಅಧಿಕಾರಿಗಳ ವಿವರ ಇಂತಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ:

ಸಹಕಾರ ಸಂಘಗಳ ಉಪನಿಬಂಧಕರು
ಉತ್ತರ ವಲಯ,ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ:

ಅಧೀಕ್ಷಕರು,
ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ,
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಮೇಲ್ಮನವಿ ಪ್ರಾಧಿಕಾರ:
ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು

ಸಾರ್ವಜನಿಕ ಮಾಹಿತಿ ಅಧಿಕಾರಿ
ಹಾಗೂ ಸಹಕಾರ ಸಂಘಗಳ ಉಪನಿಬಂಧಕರು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ,

ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಕಛೇರಿನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560 003

ಅನುಬಂಧ–1

ಸಿಬ್ಬಂದಿಗಳ ಕರ್ತವ್ಯ ಹಂಚಿಕೆ ಪಟ್ಟಿ

ಎಸ್–1	ಶ್ರೀ ಕೆ.ಗೋವಿಂದಸ್ವಾಮಿ, ಅಧೀಕ್ಷಕರು
1.	ಕಛೇರಿಯ ಸಿಬ್ಬಂದಿಯ ಮೇಲ್ವಿಚಾರಣೆ
2.	ಕಛೇರಿಯಲ್ಲಿ ಸ್ವೀಕೃತವಾದ ಟಪಾಲುಗಳನ್ನು (ಅರೆ ಸರ್ಕಾರಿ ಪತ್ರಗಳನ್ನು ಹೊರತುಪಡಿಸಿ) ತೆರೆಯುವುದು ,ಶಾಖೆಗಳನ್ನು ಗುರುತಿಸುವುದು
3.	ಹಾಜರಾತಿ ಪುಸ್ತಕ, ಸಿಬ್ಬಂದಿ ಚಲನ ವಲನ ವಹಿ,ಸಾಂದರ್ಭಿಕ ರಜೆ ಪುಸ್ತಕ ಇತ್ಯಾದಿ ಅವಶ್ಯಕ ವಹಿಗಳನ್ನು ನಿರ್ವಹಿಸುವುದು
4.	ಸಿಬ್ಬಂದಿ ಶಾಖೆಯ ಪೂರ್ಣ ನಿರ್ವಹಣೆ.
5.	ಅಧಿಕಾರಿ ಮತ್ತು ನೌಕರರ ವೈಯ್ಯಕ್ತಿಕ ಕಡತಗಳು ಹಾಗೂ ಸೇವಾ ಪುಸ್ತಕಗಳನ್ನು ನಿರ್ವಹಿಸುವುದು
6,	ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ, ರಜೆಗಳ ಮಂಜೂರಾತಿ, ನಿವೃತ್ತಿ ವೇತನ ಪ್ರಕರಣಗಳ ಬಗ್ಗೆ ಕ್ರಮ
7.	ವಿಧಾನಸಭಾ, ವಿಧಾನ ಪರಿಷತ್ ಸದಸ್ಯರ ಪ್ರಶ್ನೆಗಳಿಗೆ ಸಂಬಂಧಪಟ್ಟ ವಹಿ ನಿರ್ವಹಿಸಿ, ಸಕಾಲದಲ್ಲಿ ಶಾಖೆಗಳಿಂದ ಶೀಘ್ರ ಉತ್ತರ ಸಲ್ಲಿಕೆಗೆ ಕ್ರಮ
8.	ಸಹಕಾರ ಸಂಘಗಳ ನೋಂದಣಿ ಮತ್ತು ಉಪನಿಯಮಗಳ ತಿದ್ದುಪಡಿ ನೊಂದಣಿ ಪ್ರಕರಣಗಳ ಕಡತಗಳ ಕ್ರಮ ಹಾಗೂ ಸಂಬಂಧಪಟ್ಟ ವಹಿ, ನಿರ್ವಹಣೆ ಹಾಗೂ ಕಡತಗಳ ನಿರ್ವಹಣೆ ಪತ್ರ ವ್ಯವಹಾರ.
9.	ಜಿಲ್ಲಾ ವ್ಯಾಪ್ತಿಯ ಸಿಬ್ಬಂದಿಗಳ ಹಾಗೂ ಕಛೇರಿತಯ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಕಡತ ನಿರ್ವಹಣೆ ಹಾಗೂ ಕ್ರಮ
10.	ಕಛೇರಿ ಸಿಬ್ಬಂದಿಗಳ ಮೇಲ್ವಿಚಾರಣೆ ಕಛೇರಿ ಶಿಸ್ತು ಪಾಲನೆ ಹಾಗೂ ಕಡತಗಳ ಶೀಘ್ರವಿಲೇವಾರಿಗೆ ಮೇಲ್ವಿಚಾರಣೆ ನಡೆಸುವುದು,
11.	ಅಧೀನಾಧಿಕಾರಿಗಳಿಗೆ ಸಂಬಂಧಪಟ್ಟ ಪತ್ರ ವ್ಯವಹಾರಗಳಿಗೆ ಉಪ ನಿಬಂದಕರಿಂದ ಅನುಮೋದಿಸಲ್ಪಟ್ಟ ನಂತರ ಶುದ್ಧ ಪ್ರತಿಗಳಿಗೆ ಉಪನಿಬಂಧಕರ ಪರವಾಗಿ (ಕರಡು ಉಪನಿಬಂಧಕರು ರವರಿಂದ ಅನುಮೋದಿಸಲ್ಪಟ್ಟಿದೆ ಇಂದು ಷರಾದೊಂದಿಗೆ) ಸಹಿ ಮಾಡುವುದು
12.	ಮಾಹಿತಿ ಹಕ್ಕು ಕಾಯ್ದೆ ಯಡಿ, ಮಾಹಿತಿ ಹಕ್ಕು ನೀಡುವ ಅಧಿಕಾರಿಯಾಗಿ, ಕ್ರಮ ವಹಿಯ ನಿರ್ವಹಣೆ ಹಾಗೂ ಕಡತಗಳ ಶೀಘ್ರವಿಲೇವಾರಿಗೆ ಮೇಲುಸ್ತುವಾರಿ
13.	ನಿಯತಕಾಲಿಕ ವರದಿಗಳು ಸಕಾಲದಲ್ಲಿ ಸಕ್ಷಮ ಪ್ರಾಧಿಕಾರಿ ಕಛೇರಿಗಳಿಗೆ ಸಲ್ಲಿಸುವ ಕುರಿತು ಮೇಲ್ವಿಚಾರಣೆ.
14.	ಉಪನಿಬಂಧಕರವರು ವಹಿಸುವ ಇನ್ನಿತರ ಕರ್ತವ್ಯ ನಿರ್ವಹಣೆಗಳು
ಎಸ್–2	**ಶ್ರೀ ಸಿದ್ದಗಂಗಪ್ಪ , ಸಹಕಾರ ಅಭಿವೃದ್ಧಿ ಅಧಿಕಾರಿ**
01.	ಕಲಂ 17, ಕಲಂ 29(ಸಿ)ಗೆ ಸಂಬಂಧಪಟ್ಟ ಕಡತಗಳ ನಿರ್ವಹಣೆ
02.	ಕಲಂ 30, 31, 28(ಎ)(5)ಗೆ ಸಂಬಂಧಪಟ್ಟ ಸಂಪೂರ್ಣ ಕಡತಗಳು , ತಪ್ಪಿತಸ್ಥ ಆಡಳಿತ ಮಂಡಳಿ ರದ್ದತಿಗೆ ಆರೋಪಗಳನ್ನು ಸಿದ್ಧಪಡಿಸಿ, ಆಡಳಿತ ಮಂಡಳಿ, ರದ್ದತಿಗೆ ಕ್ರಮ, ಅವಧಿ ವಿಸ್ತರಣೆ ಮಂಡಳಿ ಹಾಗೂ ಆಡಳಿತ ಮಂಡಳಿ ಪುನರ್ ರಚನೆ ಬಗ್ಗೆ ಪತ್ರ ವ್ಯವಹಾರಗಳು.
03.	ಅನ್ಯ ಕಾರ್ಯನಿಮಿತ್ತ ತೆರಳಿದಾಗ ಸಹಕಾರ ಸಂಘಗಳ ಉಪನಿಬಂಧಕರು ರವರ ಪರವಾಗಿ ಮೇಲಧಿಕಾರಿಗಳ ಸಭೆಗಳು ಹಾಗೂ ಇತರೆ ಸಭೆಗಳಿಗೆ ಹಾಜರಾಗಿ, ಸಭೆಯ ನಡವಳಿಗಳ ಬಗ್ಗೆ ವರದಿ ಸಲ್ಲಿಕೆ.
04.	ಮೇಲಧಿಕಾರಿಗಳು ಕಛೇರಿಗೆ ಭೇಟಿ ನೀಡಿದಾಗ ಭೇಟಿ ಟಿಪ್ಪಣಿ ಹಾಗೂ ಜಿಲ್ಲೆಯ ಪ್ರೊಫೈಲ್ ತಯಾರಿಕೆಗೆ, ವರದಿ ಸಲ್ಲಿಕೆಗೆ ಕ್ರಮ
05	ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಮಗ್ರ ಕಡತಗಳ ನಿರ್ವಹಣೆ, ಸಮಗ್ರ ಮಾಹಿತಿ ಕ್ರೋಢೀಕರಣ ಅಂಕಿ ಅಂಶಗಳ ಕ್ರೋಢೀಕರಣ

06. ಚೀಟಿ ನಿಧಿ ಸಂಸ್ಥೆಗಳ ಸಂಬಂಧಪಟ್ಟ ವಾರ್ಷಿಕ ಪರಿವೀಕ್ಷಣಾ ಪಟ್ಟಿ ತಯಾರಿಕೆ ಹಾಗೂ ಪರಿವೀಕ್ಷಣಾ ವರದಿ ತಯಾರಿಸಿ ಸಹಕಾರ ಸಂಘಗಳ ಉಪನಿಬಂಧಕರು ರವರು ಪರಿವೀಕ್ಷಣೆ ಕೈಗೊಳ್ಳಲು ವರದಿ ತಯಾರಿಸಿ ಸಲ್ಲಿಕೆ.

07. ವ್ಯಾಜ್ಯ ಶಾಖೆಯ ಸಂಬಂಧಪಟ್ಟಂತೆ ಉಪನಿಬಂಧಕರ ಹೆಸರಿನಲ್ಲಿ ತೆರೆಯಲಾದ ವೈಯಕ್ತಿಕ ಠೇವಣಿ (ಪಿಡಿ ಖಾತೆ ಯಾ ಉಳಿತಾಯ ಖಾತೆ) ಲೆಕ್ಕಗಳ ಮೈತ್ರೀಕರಣ(ರಿಕನ್ಸಿಲೇಷನ್) ಮಾಡಿ ತಾಳೆ ಮಾಡಿ ಮೇಲಧಿಕಾರಿಗಳಿಗೆ ಕಾಲಕಾಲಕ್ಕೆ ವರದಿ ಸಲ್ಲಿಕೆ.

08 ಕೃಷಿಯೇತರ ಪತ್ತಿನ ಸಂಘಗಳ ಆಡಳಿತ ನಿರ್ವಹನೆಯ ಮೇಲ್ವಿಚಾರಣೆ, ಪರಿವೀಕ್ಷಣೆ

09 ಸಮಾಪನೆ ಸಹಕಾರ ಸಂಘಗಳ ಬಗ್ಗೆ ಸಮಗ್ರ ಕಡತಗಳ ನಿರ್ವಹಣೆ.

10. ಉಪನಿಬಂಧಕರು ರವರು ವಹಿಸುವ ಇನ್ನಿತರ ಯಾವುದೇ ಕರ್ತವ್ಯ ನಿರ್ವಹಣೆಗಳು

. ಎಸ್ 3 ಶ್ರೀ ಟಿ ಜಯಶೇಖರ್ , ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

01. ಚೀಟಿ ನಿಧಿ ಸಂಸ್ಥೆಗಳ ಸಂಬಂಧಪಟ್ಟಂತೆ ಸಮಗ್ರ ಕಡತಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆ

02. ಚೀಟಿ ನಿಧಿ ವ್ಯಾಜ್ಯದ ಕಡತಗಳ ನಿರ್ವಹಣೆ, ಚೀಟಿ ನಿಧಿಗಳ ಪಿಡಿ ಖಾತೆಯ ನಿರ್ವಹಣೆ ಹಾಗೂ ಲೆಕ್ಕಗಳ ಮೈತ್ರೀಕರಣ (ರಿಕನ್ಸಿಲೇಷನ್)

04. ಶಾಖೆಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳ ಕ್ರೋಢೀಕರಣ, ಮಾಸಿಕ, ತ್ರೈಮಾಸಿಕ ಹಾಗೂ ತೆರಿಗೇತರ ಆದಾಯ ಮಾಹಿತಿ, ಇತ್ಯಾದಿ ನಿಯತ ಕಾಲಿಕಗಳ ಸಲ್ಲಿಕೆ.

06. ಉಪನಿಬಂಧಕರು ವಹಿಸುವ ಇನ್ನಿತರ ಕರ್ತವ್ಯ ನಿರ್ವಹಣೆಗಳು.

ಎಸ್–4 ಶ್ರೀ ಎಂ. ಲಿಯಾಖತ್ ಆಲಿಖಾನ್, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

01. ಕಲಂ 64ರ ವಿಚಾರಣೆ, ಕಲಂ 65ರ ಪರಿವೀಕ್ಷಣೆ, ಕಲಂ 68, 69 ರ ಸರ್‌ಚಾರ್ಜ್ ಪ್ರಕರಣಗಳು, ಕಲಂ 23(ಎ) ರಿಂದ 28(ಇ), 30ಇ ಪ್ರಕರಣಗಳ ಕಡತಗಳ ನಿರ್ವಹಣೆ ಸ್ವೀಕೃತವಾದ ವರದಿಗಳ ಸಂಬಂಧ ಕಲಂ 68 ರ ಆದೇಶ ಹೊರಡಿಸಿ ಅನುಪಾಲನಾ ಕ್ರಮವಿಡುವುದು. ಈ ಸಂಬಂಧ ನಿಗಧಿತ ಪರಿಶೀಲನಾ ವಹಿಗಳನ್ನು ನಿರ್ವಹಿಸುವುದು.

02. ಪಟ್ಟಣ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಕಡತಗಳ ನಿರ್ವಹಣೆ, ಮಾಹಿತಿ ಕ್ರೋಢೀಕರಣ.

03. ಚೀಟಿ ನಿಧಿಗೆ ಸಂಬಂಧಪಟ್ಟಂತೆ ವ್ಯಾಜ್ಯದ ಕಡತಗಳ ನಿರ್ವಹಣೆ ಹಾಗೂ ವಹಿ ನಿರ್ವಹಣೆ.

04. ಚೀಟಿ ನಿಧಿ ನಾಮಿನಿಗಳಿಗೆ ವ್ಯಾಜ್ಯದ ಕಡತಗಳನ್ನು ವಹಿಸುವುದು, ಸ್ವೀಕೃತವಾದ ಪಿ.ಡಿ. ಖಾತೆ ನಿರ್ವಹಣೆ, ಲೆಕ್ಕಗಳ ತಾಳೆ ಮಾಡುವುದು ಇತ್ಯಾದಿ.

05. ಚೀಟಿ ನಿಧಿಗೆ ಸಂಬಂಧಪಟ್ಟಂತೆ ಪರಿವೀಕ್ಷಣೆ ಕಡತಗಳ ನಿರ್ವಹಣೆ ಮತ್ತು ಕ್ರಮ

06. ಕಛೇರಿ ಮುಖ್ಯಸ್ಥರು ವಹಿಸುವ ಇನ್ನಿತರೆ ಕರ್ತವ್ಯ ಮತ್ತು ಜವಾಬ್ದಾರಿಗಳು.

ಎಸ್–5 ಶ್ರೀ ಡಿ.ಸಿ. ಗಣೇಶ್, ಸಹಕಾರ ಸಂಘಗಳ ನಿರೀಕ್ಷಕರು,

01. ಕಛೇರಿಯ ಅಧಿಕಾರಿ, ಕಛೇರಿಯ ಸಿಬ್ಬಂದಿಗಳ ವೇತನ ಬಿಲ್ಲುಗಳನ್ನು ತಯಾರಿಸಿ, ಕ್ಲುಪ್ತಕಾಲದೊಳಗೆ ಸಂಬಳ ಬಟವಾಡೆ ಗೆ ಕ್ರಮವಹಿಸುವುದು.

02. ನಗದು ಪುಸ್ತಕ, ನಗಧೀಕರಣ ವಹಿ, ಸಾದಿಲ್ವಾರು ವಹಿ, ಬಳಸಲ್ಪಡುವ ಸಾಮಾಗ್ರಿಗಳ ವಹಿ, ರಸೀತಿ ದಾಸ್ತಾನು ವಹಿ, ಚೆಕ್ ವಹಿ, ಕೆಜಿಐಡಿ , ಜಿಪಿಎಫ್, ಹಬ್ಬದ ಮುಂಗಡಗಳು ಇತ್ಯಾದಿ ಸಾಲಗಳ ವಸೂಲಾತಿ ವಹಿ, ಹಣ ಬಟವಾಡೆಯಾದ ವಹಿ,, ಇತ್ಯಾದಿ ಲೆಕ್ಕ ಶಾಖೆಯಲ್ಲಿ ನಿರ್ವಹಿಸಬೇಕಾದ ವಹಿಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ,

03. ಕಛೇರಿಯ ವಾಹನ ಲಾಗ್ ಪುಸ್ತಕ ನಿರ್ವಹಿಸಿ, ಪೆಟ್ರೋಲ್ ಬಿಲ್ ತಯಾರಿಕೆ.

04. ಡಿ.ಸಿ.ಬಿಲ್ಲುಗಳು, ಪ್ರಯಾಣ ಭತ್ಯೆಬಿಲ್ಲುಗಳ ತಯಾರಿಕೆ ಹಾಗೂ ಅಧೀನ ಕಛೇರಿಗಳ ಡಿಸಿ ಬಿಲ್, ಪ್ರಯಾಣಭತ್ಯೆ ಬಿಲ್ಲುಗಳ ಮೇಲು ಸಹಿ ಮತ್ತು ಕಡತಗಳು, ಪರಿಶೀಲನಾ ವಹಿಗಳ ನಿರ್ವಹಣೆ

05. ಕಛೇರಿ ಸಿಬ್ಬಂದಿಗಳ ವೈದ್ಯಕೀಯ .ವೆಚ್ಚ ಮರುಪಾವತಿ ಕ್ಲೇಮುಗಳ ಕಡತ ಹಾಗೂ ಅಧೀನ ಕಛೇರಿಗಳಿಂದ ಸಲ್ಲಿಸಲ್ಪಡುವ ಕ್ಲೈಮುಗಳ ಪರಿಶೀಲನೆ ಹಾಗೂ ಮೇಲುಸಹಿಗೆ ಕ್ರಮ

06. ಕಛೇರಿಯ ಪೀಠೋಪಕರಣಗಳನ್ನು ಹಾಗೂ ಗ್ರಂಥಾಲಯ ನಿರ್ವಹಣೆ ಮತ್ತು ವಹಿಗಳ ನಿರ್ವಹಣೆ

07. ಅನುಪಯುಕ್ತ ಪೀಠೋಪಕರಣಗಳು ವಿಲೇವಾರಿಗೆ ಕ್ರಮ

08. ಜಿಲ್ಲೆಯ ಯೋಜನೇತರ ಸಿಬ್ಬಂದಿ ವೆಚ್ಚಗಳ ಲೆಕ್ಕಗಳು ಖಜಾನೆ ಷೆಡ್ಯೂಲ್ನೊಂದಿಗೆ ತಾಳೆ ಮಾಡಿ ವರದಿ ಸಲ್ಲಿಕೆ.

09. ಅನ್ಯ ಸೇವೆಯಲ್ಲಿರುವ ಹಾಗೂ ನಿಯಮ 441ರ ನ್ವಯ ಅಧಿಕಾರಿ ಸಿಬ್ಬಂದಿಗಳ ನಿವೃತ್ತಿ ಅಂಶದಾನ ರಜೆ ಸಂಬಳ ಹಾಗೂ ಸಿಬ್ಬಂದಿ ವೆಚ್ಚಗಳ ಸರ್ಕಾರಕ್ಕೆ ಜಮಾ ಹಾಗೂ ಪರಿಶೀಲನಾ ವಹಿ ನಿರ್ವಹಣೆ

10, ಕಛೇರಿಯಲ್ಲಿರುವ ಯಂತ್ರೋಪಕರಣಗಳ ನಿರ್ವಹಣೆ ಸಂಬಂಧಪಟ್ಟ ಸಾಮಾಗ್ರಿ ಕಡತಗಳ ನಿರ್ವಹಣೆ.

11. ಸಂಬಳ ಮೂಲಕ ಆದಾಯ ತೆರಿಗೆ ವಸೂಲಾತಿ ಹಾಗೂ ಸಮಗ್ರ ಕಡತಗಳ ನಿರ್ವಹಣೆ ಹಾಗೂ ಆದಾಯತೆರಿಗೆ ವರದಿ ಸಲ್ಲಿಕೆ ಆದಾಯ ತೆರಿಗೆ ಕಛೇರಿಗೆ ಸಲ್ಲಿಕೆಗೆ ಕ್ರಮ

12. ಶಾಖೆಗೆ ಸಂಬಂಧಪಟ್ಟಂತೆ ನಿಯತ ಕಾಲಿಕಗಳ ಸಲ್ಲಿಕೆ

13. ಲೇವಾದೇವಿ, ಗಿರವಿದಾರರ ಪರವಾನಿಗೆ ಸಂಬಂಧಪಟ್ಟಂತೆ ಸಮಗ್ರ ಕಡತ, ವಹಿಗಳ ನಿರ್ವಹಣೆ, ನಿಯಕಾಲಿಕಗಳ ಸಲ್ಲಿಕೆ, ಮಾಹಿತಿ ಸಂಗ್ರಹ ಇತ್ಯಾದಿ.

14. ಲೇವಾದೇವಿ, ಗಿರವಿದಾರರಿಗೆ ಸಂಬಂಧಪಟ್ಟಂತೆ ಸ್ವೀಕೃತವಾದ ದೂರು ಕಡತಗಳ ನಿರ್ವಹಣೆ-ಕ್ರಮ.

15. ಎಸ್-6 ಶಾಖೆಯ ದಿನಾಂಕ:28-6-2010ರಲ್ಲಿ ವಿವರಿಸಿದ ಪೂರ್ಣ ಪ್ರಭಾರ.

16. ಕಛೇರಿ ಮುಖ್ಯಸ್ಥರು ವಹಿಸುವ ಇನ್ನಿತರೆ ಕರ್ತವ್ಯ ಮತ್ತು ಜವಾಬ್ದಾರಿಗಳು.

ಎಸ್-6. ಹುದ್ದೆ ಖಾಲಿ ಡಿ.ಸಿ.ಗಣೇಶ ಹೆಚ್ಚುವರಿ ಪ್ರಭಾರ ,ಸಹಕಾರ ಸಂಘಗಳ ನಿರೀಕ್ಷಕರು

01. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ್ ಬ್ಯಾಂಕ್, ಬಳಕೆದಾರರ ಸಹಕಾರ ಸಂಘಗಳು, ಇತ್ಯಾದಿ ಸಹಕಾರ ಸಂಘಗಳ ವ್ಯಾಪಾರ ಅಭಿವೃದ್ಧಿ ಯೋಜನೆ ಒಳಗೊಂಡಂತೆ ಪತ್ರ ವ್ಯವಹಾರ.

02. ಕೃಷಿ ಸಾಲ ವಿತರಣೆ , ವಸೂಲಾತಿ .ಡಿಸಿಬಿ ಸಂಬಂಧ ಡಿಸಿಸಿ, ಪಿಕಾರ್ಡ್, ಕ್ಯಾಸ್ಕಾಡ್ ್ ಬ್ಯಾಂಕ್,ಗಳೊಂದಿಗೆ ಪತ್ರ ವ್ಯವಹಾರ, ಅಂಕಿ-ಅಂಶಗಳ ಸಂಗ್ರಹಣೆ , ನಿಯತಕಾಲಿಕ ವರದಿಗಳ ಸಲ್ಲಿಕೆ.

03. ಕೆ.ಸಿ.ಸಿ. ಮತ್ತು ಸ್ವಸಹಾಯ ಸಂಘಗಳು , ವಿಫಲಬಾವಿ,ಸಾಲ ಮನ್ನಾ ಯೋಜನೆ, ಬಿ.ಡಿ.ಪಿ.ಪ್ರಗತಿಗೆಕಡತ ನಿರ್ವಹಣೆ ಹಾಗೂ ಅಂಕಿ-ಅಂಶಗಳ ಸಂಗ್ರಹಣೆ, ನಿರ್ವಹಣೆ.

04. ಕೆ.ಪಿ.ಎಂ.ಆರ್. ಕ್ಯಾಕಂಪ್ ಆಕ್ಟ್, ಮಾಹಿತಿ ಸಲ್ಲಿಕೆ, ಕಡತ ನಿರ್ವಹಣೆ.

05. ವಾರ್ಷಿಕ ಮುಂಗಡ ಅಂಕಿ-ಅಂಶಗಳು, ಹಾಗೂ ವಾರ್ಷಿಕ ಅಂಕಿ ಅಂಶಗಳ ಸಲ್ಲಿಕೆಗೆ ಕ್ರಮ, ಕಡತ ನಿರ್ವಹಣೆ

06. ಪಟ್ಟಣ ಬ್ಯಾಂಕ್ ಗಳ ಸಂಬಂಧಪಟ್ಟಂತೆ ಸಮಗ್ರ ಕಡತ ನಿರ್ವಹಣೆ

07. ಪತ್ತು ಮತ್ತು ಪತ್ತೇತರ ವ್ಯವಹಾರಗಳ ಕಡತಗಳು ನಿರ್ವಹಣೆ ಹಾಗೂ ಮಾಹಿತಿ ಸಂಗ್ರಹಣೆ

08. ಶಾಖೆಗೆ ಸಂಬಂಧಪಟ್ಟಂತೆ. ನಿಯತ ಕಾಲಿಕ ಕಡತಗಳ ಸಲ್ಲಿಕೆ .

09. ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು

ಎಸ್-7 ಶ್ರೀ ಟಿ.ಡಿ.ಉಮೇಶ್ ಪ್ರಥಮ ದರ್ಜೆ ಸಹಾಯಕರು

01. ಸಹಕಾರ ಸಂಘಗಳ ಕಾಯ್ದೆ ಕಲಂ 69, 70ರಡಿ ದಾವೆಗಳು , ಕಲಂ 105 ಮತ್ತು 106ರ ಮೇಲ್ಮನವಿಗಳು ಹಾಗೂ ಕಲಂ 109ಕ್ಕೆ , ಸಂಬಂಧಿಸಿದ ಕಡತಗಳ ನಿರ್ವಹಣೆ, ಸಮಗ್ರ ವ್ಯಾಜ್ಯ ಕಡತಗಳ ನಿರ್ವಹಣೆ

02. ಗೌರವ ಉಚ್ಛ ನ್ಯಾಯಾಲಯ, ಕರ್ನಾಟಕ ಅಪೀಲು ಪ್ರಾಧಿಕಾರ ಹಾಗೂ ಇತರೆ ನ್ಯಾಯಾಲಯಗಳ ಸಂಬಂಧಪಟ್ಟ ವ್ಯಾಜ್ಯಗಳ ಕಡತಗಳ ನಿರ್ವಹಣೆ ಹಾಗೂ ಕ್ರಮ

01. ಸಹಕಾರ ಅಭಿವೃದ್ಧಿ ಅಧಿಕಾರಿ ರವರ ಸಹಾಯಕರಾಗಿ ಕಾರ್ಯ ನಿರ್ವಹಣೆ (ತರಬೇತಿ ಉದ್ದೇಶದಿಂದ)

02 ಸಹಕಾರ ಸಂಘಗಳ ಉಪನಿಬಂಧಕರು ರವರ ಹೆಸರಿನಲ್ಲಿ ಡಿ.ಸಿ.ಸಿ.,ಬ್ಯಾಂಕಿನಲ್ಲಿ ನಿರ್ವಹಿಸುವ ಪಿ.ಡಿ. ಖಾತೆಗಳನ್ನು ಕಛೇರಿ ನಗದು ಪುಸ್ತಕಕ್ಕೆ ತಾಳೆ ನೋಡಿ " ಮೈತ್ರೀಕರಣ" ಗೊಳಿಸುವುದು (ರಿಕನ್ಸಿ ಲೇಷನ್) ಮಾರ್ಗದರ್ಶನದಲ್ಲಿ.

03. ಕಲಂ 70ರ ಪಂಚನಿರ್ಣಯ ಪ್ರಕರಣಗಳ ಕಡತ ನಿರ್ವಹಣೆ, ಗೌರವ ಮಧ್ಯಸ್ಥದಾರರು, ಇಲಾಖಾ ಮಧ್ಯಸ್ಥದಾರರಿಗೆ ವ್ಯಾಜ್ಯ ಪ್ರಕರಣಗಳನ್ನು ವಹಿಸುವಿಕೆ., ನಗದು ಪುಸ್ತಕ ವ್ಯಾಜ್ಯಶಾಖೆಗೆ ಸಂಬಂಧಪಟ್ಟಂತೆ ನಿರ್ವಹಣೆ.

04. ತೆರಿಗೇತರ ಆದಾಯದ ಮಾಹಿತಿಗೆ ಅಗತ್ಯ ಮಾಹಿತಿ ಒದಗಿಸುವುದು ಶಾಖೆಗೆ ಸಂಬಂಧಪಟ್ಟಂತೆ.

05. ಕಛೇರಿಯ ಎಲ್ಲಾ ಶಾಖೆಗಳಿಂದ ಎಂ.ಎಂ.ಆರ್ ಮಾಹಿತಿಯನ್ನು ಉಪನಿಬಂಧಕರ ಸಹಿಯ ನಂತರ ಸಂಗ್ರಹಿಸಿ ಬುಕ್ ಲೆಟ್ ಅಣಿಗೊಳಿಸಿ, ಸಕ್ಷಮ ಪ್ರಾಧಿಕಾರಿ ಕಛೇರಿಗೆ ಸಲ್ಲಿಕೆ ಕ್ರಮ

06. ಪ್ರಾಂತ ಮಟ್ಟದ ಸಭೆ, ರಾಜ್ಯ ಮಟ್ಟದ ಸಭೆ ಹಾಗೂ ಇತರೆ ಸಭೆಗಳಿಗೆ ಮಾಹಿತಿಯನ್ನು ಸಂಗ್ರಹಿಸಿ ಬುಕ್ ಲೆಟ್ ತಯಾರಿಸಿ ಕ್ರಮ

07. ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳ ದಿನಚರಿ ಕಾರ್ಯನಿರ್ವಹಣಾ ವರದಿಗಳ ಪುನರ್ ವಿಲೋಕ ಮತ್ತು ತಾಲ್ಲೂಕು ಪ್ರವಾಸ ಕಾರ್ಯಕ್ರಮಗಳ ಅನುಮೋದನೆ, ಕಡತ ನಿರ್ವಹಣೆ.

08. ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್-8 ಶ್ರೀ ಟಿ.ಡಿ.ಉಮೇಶ, ಪ್ರ.ದ.ಸ.

01. ಯೋಜನೆಗಳ ಅನುಷ್ಠಾನ , ವಿವಿಧ ಯೋಜನೆಗಳ ಪ್ರಸ್ತಾವವನ್ನು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಕೆ, ವಿವಿಧ ಯೋಜನೆಯಡಿ ಮಂಜೂರಾದ ಆರ್ಥಿಕ ನೆರವು ಸೌಲಭ್ಯಗಳ ಬಿಡುಗಡೆ.

02. ರಾಜ್ಯ ಅನುಧಾನ ಖಾತೆ ನಿರ್ವಹಣೆ.

03. ಸರ್ಕಾರದಿಂದ ಮಂಜೂರಾದ ಸಾಲ . ಷೇರು, ಸಹಾಯಧನದ ಸಂಬಂಧಪಟ್ಟ ಕಡತಗಳ ನಿರ್ವಹಣೆ ವಸೂಲಾತಿಯ ವಹಿಗಳ ನಿರ್ವಹಣೆ, ಯೋಜನೇಗಳ ಬಿಡುಗಡೆ ವಹಿ ನಿರ್ವಹಣೆ.

04. ದಾಸ್ತಾನು ಮಳಿಗೆ, ಸಹಕಾರ ಸಂಘಗಳ ಕಟ್ಟಡ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಅನುಮೋದನೆ ಸಂಬಂಧಪಟ್ಟ ಕಡತಗಳ ನಿರ್ವಹಣೆ.

05. ಸರ್ಕಾರವು ವಿನಿಯೋಗಿಸಿರುವ ಷೇರು ಬಂಡವಾಳದ ಮೇಲೆ ಕಡ್ಡಾಯವಾಗಿ ಹಾಗೂ ಘೋಷಿಸಲ್ಪಟ್ಟ ಡಿವಿಡೆಂಡ್ ವಸೂಲಾತಿ ಹಾಗೂ ಸರ್ಕಾರಕ್ಕೆ ಜಮಾ ಮಾಡುವ ಕುರಿತು ಕ್ರಮ.

06. ತೆರಿಗೇತರ ಆದಾಯದ ಮಾಹಿತಿಗೆ ಸಲ್ಲಿಸುವಿಕೆಗೆ ಮಾಹಿತಿ ಸಲ್ಲಿಕೆ

07. ಬರಪರಿಹಾರ ,ಪ್ರಕೃತಿ ವಿಕೋಪ ಪರಿಹಾರ, ಇತ್ಯಾದಿ ವಿಶಿಷ್ಟ ಕಡತಗಳ ನಿರ್ವಹಣೆ.

08. ಯಶಸ್ವಿನಿ ಯೋಜನೆಗೆ ಸಂಬಂಧಪಟ್ಟಂತೆ ಸಮಗ್ರ ಕಡತ ನಿರ್ವಹಣೆ ಹಾಗೂ ಕ್ರಮ

09. ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್–09 ಶ್ರೀ ಕೆ.ಚಂದ್ರಶೇಖರ್, ದ್ವಿದರ್ಜೆ ಸಹಾಯಕರು

01. ಕಛೇರಿಯ ಸಾಮಾನ್ಯ ಸ್ವೀಕೃತಿ ಹಾಗೂ ರವಾನೆ ಕೆಲಸಗಳ ನಿರ್ವಹಣೆ

02. ವಾರ್ಷಿಕ ಮಹಾಸಭೆ ಆಡಳಿತ ಮಂಡಳಿಗಳ ಚುನಾವಣೆ ಕಡತಗಳು ಹಾಗೂ ಪರಿಶೀಲನಾ ವಹಿಗಳ ನಿರ್ವಹಣೆ.

03. ಎಂ.ಎಂ.ಆರ್ ಮಾಹಿತಿ, ರಾಜ್ಯಮಟ್ಟದ ಸಭೆಗಳು, ಪ್ರಾಂತ ಮಟ್ಟದ ಸಭೆಗಳ ಮಾಹಿತಿಗಳ ತ:ಖ್ತೆಗಳನ್ನು ಕಛೇರಿಯ ವಿಷಯ ನಿರ್ವಾಹಕರಿಂದ ಸಂಗ್ರಹಿಸಿ ಬುಕ್ ಲೆಟ್ ಮಾಡಿ ಸಲ್ಲಿಸಲು ಕ್ರಮ .

04. ಚೀಟಿ ಸಂಸ್ಥೆಗಳ ಪರಿವೀಕ್ಷಣೆಯ ಸಹಾಯಕರಾಗಿ ಕೆಲಸ ನಿರ್ವಹಿಸುವುದು.

05. ಸಹಕಾರ ಸಂಘಗಳ ನೋಂದಣಿ ಉಪನಿಯಮಗಳ ತಿದ್ದುಪಡಿ, ಸೇವಾ ನಿಯಮ ಇತ್ಯಾದಿ ವಿಷಯಗಳ ಸಹಾಯಕರಾಗಿ ಕೆಲಸ ನಿರ್ವಹಣೆ.

06. ವಾರ್ಷಿಕ ಮಹಾಸಭೆಗಳು, ಚುನಾವಣಾ ಕಡತಗಳ ನಿರ್ವಹಣೆ.

07. ಶಾಖೆಯಿಂದ ಸಲ್ಲಿಸಲ್ಪಡುವ ನಿಯತಕಾಲಿಕ ಗಳ ಸಲ್ಲಿಕೆ

08. ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್–10 ಶ್ರೀಮತಿ ಎಸ್.ಎ.ಶೈಲಜ , ಹಿರಿಯ ಬೆರಳಚ್ಚುಗಾರರು

01. ಕಛೇರಿಯ ಪತ್ರ ವ್ಯವಹಾರಗಳು, ಅಂಕಿ–ಅಂಶಗಳು ಹಾಗೂ ಮಾಹಿತಿ ತ:ಖ್ತೆಗಳನ್ನು ಕಂಪ್ಯೂಟರ್‌ನಲ್ಲಿ ಹಾಗೂ ಬೆರಳಚ್ಚು ಮಾಡುವುದು.

02. ಕಛೇರಿಗೆ ಮಿಂಚಂಚೆ(ಇ–ಮೇಲ್) ಮೂಲಕ ಪ್ರತಿಗಳನ್ನು ಸ್ವೀಕರಿಸಿ ಸ್ವೀಕೃತವಾದ ಇ–ಮೇಲ್ ಸ್ವೀಕೃತಿ ವಹಿಯಲ್ಲಿ ದಾಖಲಿಸಿ ಕಛೇರಿಯ ಮುಖ್ಯಸ್ಥರ ಗಮನಕ್ಕೆ ಸಲ್ಲಿಸುವುದು.

03. ಕಛೇರಿಯಿಂದ ಇಲಾಖಾ ಕೇಂದ್ರ ಕಛೇರಿಗೆ ಹಾಗೂ ಸಂಯುಕ್ತ ನಿಬಂಧಕರ ಕಛೇರಿಗಳಿಗೆ ಇ–ಮೇಲ್ ಮುಖಾಂತರ ಮಾಹಿತಿಯನ್ನು ಕಳುಹಿಸುವುದು ಹಾಗೂ ಕಳುಹಿಸಲ್ಪಟ್ಟ ಮಾಹಿತಿಯನ್ನು ಮುದ್ರಿತ ಪ್ರತಿಯೊಂದಿಗೆ, ಅವಶ್ಯಕ ಸೂಚನೆಗಳಿದ್ದಲ್ಲಿ ಸಿಡಿ ಪ್ರತಿಯನ್ನು ಅಣಿಗೊಳಿಸುವುದು.

04. ಸಹಕಾರ ಸಂಘಗಳ ಉಪನಿಬಂಧಕರವರ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ಹಾಗೂ ದಿನಚರಿ ಕಡತಗಳನ್ನು ನಿರ್ವಹಿಸುವುದು.

05. ಕಛೇರಿಯ ಲೇಖನ ಸಾಮಾಗ್ರಿಗಳ ಕಡತ ಹಾಗೂ ದಾಸ್ತಾನು ವಹಿ, ವಿತರಣೆ ವಹಿಗಳನ್ನು ನಿರ್ವಹಿಸುವುದು ಸಂಬಂಧಪಟ್ಟ ಪತ್ರ ವ್ಯವಹಾರ.

06. ಕಛೇರಿಯ ಫ್ಯಾಕ್ಸ್ ಯಂತ್ರೆ ನಿರ್ವಹಣೆ ಹಾಗೂ ಜೆರಾಕ್ಸ್ ಯಂತ್ರದ ಮೂಲಕ ಗಣಕ ಯಂತ್ರದಲ್ಲಿ ನಮೂದಿಸಿದ ಮಾಹಿತಿ, ಪತ್ರ ವ್ಯವಹಾರಗಳನ್ನು ಮುದ್ರಿಸುವುದು ಹಾಗೂ ಕಛೇರಿಯಲ್ಲಿರುವ ಫ್ಯಾಕ್ಸ್, ಲೇಸರ್ ಪ್ರಿಂಟರ್‌ಗಳು, ಗಣಕಯಂತ್ರಗಳು, ಹಾಗೂ ಬೆರಳಚ್ಚು ಯಂತ್ರಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸುವುದು ಹಾಗೂ ಪ್ರತಿ ಯಂತ್ರದ ಸಂಬಂಧ ವಹಿಯನ್ನು ನಿರ್ವಹಿಸಿ ಪ್ರತಿ ಮಾಹೆ ಸುಸ್ಥಿತಿಯಲ್ಲಿರುವ ಬಗ್ಗೆ ಕಛೇರಿಯ ಮುಖ್ಯಸ್ಥರ ಗಮನಕ್ಕೆ ತಂದು ದೃಢೀಕರಿಸುವುದು.

07. ಉಪನಿಬಂಧಕರ ಆಪ್ತ ಶಾಖೆಯ ಹೆಚ್ಚುವರಿ ಕೆಲಸಗಳ ನಿರ್ವಹಣೆ

08. ನ್ಯಾಯಾಲಯದಲ್ಲಿ ಕಾರ್ಯಕಲಾಪಗಳ ನಡವಳಿಗಳನ್ನು , ಸಭೆಗಳ ನಡವಳಿಗಳನ್ನು ದಾಖಲಿಸುವುದು.

09. ಉಪನಿಬಂಧಕರು ನೀಡುವ ಉಕ್ತಲೇಖನವನ್ನು ಪಡೆದು ಶುದ್ದಪ್ರತಿಗಳನ್ನು ತಯಾರಿಸುವುದು.

10. ಶುದ್ದಪ್ರತಿ ವಹಿ (ಫೇರ್ ಕಾಪಿಯಿಂಗ್ ರಿಜಿಸ್ಟರ್) ನಿರ್ವಹಣೆ

11. ಕಛೇರಿಯ ಮುಖ್ಯಸ್ಥರು ವಹಿಸುವ ಇತರೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.

11. ಶ್ರೀ ಹೆಚ್.ಎಸ್.ಸೋಮಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ

01.ಸಂಘ ಸಂಸ್ಥೆಗಳ ನೋಂದಣಿ , ಉಪನಿಯಮಗಳ ತಿದ್ದುಪಡಿ ನೋಂದಣಿ , ಸಂಘ ಸಂಸ್ಥೆಗಳ ವಾರ್ಷಿಕ ಪಟ್ಟಿ , ಕಾಲಿಕ ವರದಿಗಳ ದಾಖಲಾತಿ, ಸಂಬಂಧಪಟ್ಟಂತೆ ಸಮಗ್ರ ಕಡತಗಳ ನಿರ್ವಹಣೆ ಮತ್ತು ವಹಿಗಳ ನಿರ್ವಹಣೆ,

02. ಸಂಘ ಸಂಸ್ಥೆ ನೋಂದಣಿ ಕುರಿತಂತೆ ಉದ್ಭವಿಸುವ ವ್ಯಾಜ್ಯದ ಕಡತಗಳ ನಿರ್ವಹಣೆ.

03, ಸಂಘ ಸಂಸ್ಥೆಗಳ ಕುರಿತ ವಿವಿಧ ನ್ಯಾಯಾಲಗಳಲ್ಲಿ ಮತ್ತು ಸಕ್ಷಮ ಪ್ರಾಧಿಕಾರದಲ್ಲಿ ನಡೆಯುವ ತಕರಾರು ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಕ್ರಮವಿಡುವುದು.

04. ತೆರಿಗೇತರ ಆದಾಯ ಕುರಿತಂತೆ ಖಜಾನೆ ಲೆಕ್ಕಗಳೊಂದಿಗೆ ಸಮೀಕರಿಸಿ ಕಾಲಿಕ ವರದಿ ಸಲ್ಲಿಸುವುದು. ಕಛೇರಿ ಮುಖ್ಯಸ್ಥರು ವಹಿಸುವ ಇತರೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.

ಶ್ರೀಮತಿ ಎಲ್ ಸರಸ್ವತಿ, ಪ್ರ.ದ.ಸ , ಶ್ರೀಮತಿ ಆರ್.ದಿವ್ಯಾ ಮತ್ತು ಶ್ರೀ ಕೆ.ಚಂದ್ರಶೇಖರ್ ರವರು ನೋಂದಣಿ ಶಾಖೆಯ ಸಹಾಯಕರಾಗಿ ಕಾರ್ಯನಿರ್ವಹಿಸುವುದು.

12. ಶ್ರೀ ಕೆ.ಮಹೇಶ್, ಪ್ರ.ದ.ಸ.

01. ಸಹಕಾರ ಸಂಘಗಳ ಹಣ ದುರುಪಯೋಗ ಪ್ರಕರಣಗಳ ಬಗ್ಗೆ ಕಡತಗಳ ನಿರ್ವಹಣೆ. ಸಿವಿಲ್ ಮತ್ತು ಕ್ರಿಮಿನಲ್ ಕ್ರಮದ ಬಗ್ಗೆ ಅವಶ್ಯಕ ಕ್ರಮ, ಮಾಹಿತಿ ಸಲ್ಲಿಕೆ.

02. ಕಲಂ 63ರಡಿ ಯಲ್ಲಿ ಸ್ವೀಕೃತವಾದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವರದಿಯನ್ನು ಪುನರ್ ವಿಲೋಕನಮಾಡಿ 68ರ ಆದೇಶ ಹೊರಡಿಸಿ ಕಡತಗಳನ್ನು ನಿರ್ವಹಿಸುವುದು.

03. ಎಂ.ಎಂ.ಆರ್.ಮಾಸಿಕ ತ:ಖ್ತೆಗಳು, ಪ್ರಾಂತ ಮಟ್ಟದ ,ರಾಜ್ಯಮಟ್ಟದ ಸಭೆಗಳಿಗೆ ಮಾಹಿತಿಯನ್ನು ಕ್ರೋಢೀಕರಿಸಿ ಸಲ್ಲಿಸುವುದು.

04. ತ್ರೈಮಾಸಿಕ ವರದಿಗಳು,ಹಾಗೂ ಇತರೆ ನಿಯತಕಾಲಿಕ ವರದಿಗಳನ್ನು ಕ್ರೋಢೀಕರಿಸಿ ಸಲ್ಲಿಸುವುದು.

05. ದೂರು ಅರ್ಜಿಗೆ ಸಂಬಂಧಪಟ್ಟ ಕಡತಗಳನ್ನು ನಿರ್ವಹಿಸಿ ವಿಲೇವಾರಿಯ ಕ್ರಮವಹಿಸುವುದು.

06. ಪರಿವೀಕ್ಷಣೆಗಳಿಗೆ ಕುರಿತಂತೆ ವಾರ್ಷಿಕ ಪರಿವೀಕ್ಷಣಾ ಪಟ್ಟಿ ಮತ್ತು ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಕ್ರಮವಹಿಸಿ ಕಡತ ನಿರ್ವಹಿಸುವುದು. ಅನುಪಾಲನಾ ವರದಿಗೆ ಕ್ರಮವಿಡುವುದು ಇತ್ಯಾದಿ

07. ಕಛೇರಿಯ ಮುಖ್ಯಸ್ಥರು ವಹಿಸುವ ಇತರೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.

ಡಿ.ಪಾಂಡುರಂಗಪ್ಪ,

ಸಹಕಾರ ಸಂಘಗಳ ಉಪನಿಬಂಧಕರು–1

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಭಾಗ–3	ಅನುಬಂಧ–2ಎ						
ಕ್ರ.ಸಂ	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ:	ಪ್ರಸ್ತುತ ವೃಂದಕ್ಕ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆ ಯಿಂದ ಬಿಡುಗಡೆ ಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
1	ಡಿ.ಪಾಂಡುರಂಗಪ್ಪ , ಸಹಕಾರ ಸಂಘಗಳ ಉಪನಿಬಂಧಕರು	05/06/1961 ಚಿತ್ರದುರ್ಗ	10–03–1997	01–01–2006	ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರಜಿಲ್ಲೆ ದಿನಾಂಕ: 12/06/2009	–	12–06–2009
2	ಸಿದ್ದಗಂಗಪ್ಪ , ಸಹಕಾರ ಅಭಿವೃದ್ಧಿ ಅಧಿಕಾರಿ	01/06/1958 ತುಮಕೂರು	11–01–1989	31/07/2008	ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ,ರವರ ಕಛೇರಿ ಬೆಂಗಳೂರು ನಗರಜಿಲ್ಲೆ ದಿನಾಂಕ: 17/06/2010	–	11–01–1989
3	ಹೆಚ್.ಎಸ್. ಸೋಮಶೇಖರ್ ಸಹಕಾರ ಅಭಿವೃದ್ಧಿ ಅಧಿಕಾರಿ	03/04/1953 ಹಾಸನ	21/09/1977	04–03–2008	ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,ರವರ ಕಛೇರಿ ಬೆಂಗಳೂರು ನಗರಜಿಲ್ಲೆ ದಿನಾಂಕ: 01/04/2011	–	05–07–1990
4	ಕೆ.ಗೋವಿಂದಸ್ವಾಮಿ , ಅಧೀಕ್ಷಕರು	12/07/1958, ಮೈಸೂರು	23–03–1984	12.03.2010	ಅಧೀಕ್ಷಕರು, ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ,ರವರ ಕಛೇರಿ ಬೆಂಗಳೂರು ನಗರಜಿಲ್ಲೆ ದಿನಾಂಕ:12.03.2010	–	12.03.2010
5	ಟಿ.ಜಯಶೇಖರ್, ಸ.ಸಂ.ಹಿರಿಯನಿರೀಕ್ಷಕರು	10/07/1965 ಚಿತ್ರದುರ್ಗ	21/10/1988	27–11–2009	ಸ.ಸಂ.ಹಿರಿಯನಿರೀಕ್ಷಕರು ಉಪನಿಬಂಧಕರು ಉತ್ತರ ವಲಯ ರವರ ಕಛೇರಿ ದಿನಾಂಕ: 27–11–2009	–	09–07–2003
7	ಎಂ.ಲಿಯಾಖತ್ ಆಲಿಖಾನ್, ಸ.ಸಂ.ಹಿರಿಯನಿರೀಕ್ಷಕರು	15/05/1975, ತುಮಕೂರು	23/09/1993	09–07–2010	ಸ.ಸಂ.ಹಿರಿಯನಿರೀಕ್ಷಕರು ಉಪನಿಬಂಧಕರು ಉತ್ತರ ವಲಯ ರವರ ಕಛೇರಿ ದಿನಾಂಕ: 25/04/2011		23/09/1993

1	2	3	4	5	6	7	8
8	ಟಿ.ಡಿ.ಉಮೇಶ್ , ಪ್ರಥಮ ದರ್ಜೆ ಸಹಾಯಕರು	14/04/1961 ಬೆಂಗಳೂರು	12–07–1985	02–07–2011	ಪ್ರಥಮದರ್ಜೆ ಸಹಾಯಕರು, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 2/07/2011	–	04–07–1991
9	ಸರಸ್ವತಿ ಎಲ್ ಪ್ರ.ದ.ಸಹಾಯಕರು	01–05–1964, ಬೆಂಗಳೂರು	30/08/1985	04–07–2011	ಪ್ರಥಮ ದರ್ಜೆ ಸಹಾಯಕರು, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 4/07/2011	–	30/08/1985
10	ಕೆ.ಮಹೇಶ್ , ಪ್ರ.ದ.ಸಹಾಯಕರು	8/6/1982 ಚಿತ್ರದುರ್ಗ	21/05/2007	23/10/2009	ಪ್ರಥಮ ದರ್ಜೆ ಸಹಾಯಕರು, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 23–10–2009	–	23/10/2009
11	ಆರ್.ದಿವ್ಯ, ಸ.ಸಂ.ನಿರೀಕ್ಷಕರು	11/03/1978 ಬೆಂಗಳೂರು	03–05–2008	03–05–2008	ಸ.ಸಂ.ನಿರೀಕ್ಷಕರು, ಉಪನಿಬಂಧಕರು ಉತ್ತರ ವಲಯ ರವರ ಕಛೇರಿ ದಿನಾಂಕ: 3/05/2008	–	03–05–2008
12	ಡಿ.ಸಿ.ಗಣೇಶ ಸಹಕಾರ ಸಂಘಗಳ ನಿರೀಕ್ಷಕರು	11–09–1983 ಬೆಂಗಳೂರು	23/04/2008	23/04/2008	ಸ.ಸಂ.ನಿರೀಕ್ಷಕರು ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 7/07/2008	–	07–07–2008
13	ಎಸ್.ಎ.ಶೈಲಜ , ಹಿರಿಯಬೆರಳಚ್ಚುಗಾರರು	03/05/1954 ಶಿವಮೊಗ್ಗ	25/07/1985	19/09/2005	ಹಿರಿಯ ಬೆರಳಚ್ಚುಗಾರರು, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 3/09/2009	–	23/06/2003
14	ಕೆ.ಚಂದ್ರಶೇಖರ, ದ್ವಿತಿಯ ದರ್ಜೆ ಸಹಾಯಕರು	16/02/1973 ಮಂಡ್ಯ	04–10–1997	12–11–2007	ದ್ವಿತಿಯ ದರ್ಜೆ ಸಹಾಯಕರು, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 12/11/2007	–	04–10–1997
15	ಎ.ಮುನಿಯಪ್ಪ, ಡ್ರೈವರ್	25/08/1957, ಬೆಂಗಳೂರು	21/11/1984	27/05/1993	ಡ್ರೈವರ್, ಉಪನಿಬಂಧಕರು, ಉತ್ತರ ವಲಯ ರವರ ಕಛೇರಿ ದಿನಾಂಕ: 5/07/1994	–	05–07–1994

ಭಾಗ–3	ಅನುಬಂಧ–2ಬಿ						
ಕ್ರ.ಸಂ	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ:	ಪ್ರಸ್ತುತ ವೃಂದಕ್ಕ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
1	ಎನ್.ವೆಂಕಟೇಶ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ	16/05/1967 ಕೋಲಾರ	02–02–1999	24/02/2006	ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು		15/06/2009
2	ಹೊಂಬೇಗೌಡ ಬಿ.ಇ. ಸಹಕಾರ ಅಭಿವೃದ್ಧಿ ಅಧಿಕಾರಿ	3/5/1960 ಮಂಡ್ಯ	11–07–1985	12–10–2009	ಮಾರಾಟಾಧಿಕಾರಿ, (ಸರ್ಕಾರ) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ,ರವರ ಕಛೇರಿ ಬೆಂಗಳೂರು	–	01–07–1985
3	ರಂಗಧಾಮಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ	17/05/1954 ಬೆಂಗಳೂರು	24/06/1985	07–06–2010	ಮಾರಾಟಾಧಿಕಾರಿ(ನಿಯಮ 441) ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್, ಬೆಂಗಳೂರು	–	24/6/2003
4	ಬಸಮ್ಮ ಹೆಚ್ ದೊಡ್ಡಗೌಡ್ರ ಅಧೀಕ್ಷಕರು	01–06–1981	08–10–2004	24–11–2009	ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ,ರವರ ಕಛೇರಿ ಬೆಂಗಳೂರು	–	03–12–2009
5	ರಮಾನಂದ ಎಸ್. ಸಹಕಾರ ಸಂಘಗಳ ನಿರೀಕ್ಷಕರು	23–01–1953 ಬೆಂಗಳೂರು	12–05–1983	22/02/2006	ನಿರೀಕ್ಷಕರು , ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯವೃತ್ತ ರವರ ಕಛೇರಿ	–	21/01/2005
6	ಸುಂದರರಾಜು ಜಿ.ಟಿ. ಸ.ಸಂ.ನಿರೀಕ್ಷಕರು	05–07–1973 ರಾಮನಗರ	30–11–2009	24–11–2009	ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯವೃತ್ತ ರವರ ಕಛೇರಿ	–	30/11/2009

1	2	3	4	5	6	7	8
7	ಗುರುಪ್ರಸಾದ್, ಸ.ಸಂ.ನಿರೀಕ್ಷಕರು	27–10–1982 ಬೆಂಗಳೂರು	30–11–2009	24–11–2009	ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯವೃತ್ತ ರವರ ಕಛೇರಿ	–	30/11/2009
8	ಎನ್.ರಾಧಾಮಣಿ ದ್ವಿತೀಯ ದರ್ಜೆ ಸಹಾಯಕರು	5/4/1964 ಕೋಲಾರ	04–08–2006	22/7/2006	ದ್ವಿತೀಯ ದರ್ಜೆ ಸಹಾಯಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯವೃತ್ತ ರವರ ಕಛೇರಿ	–	04–08–2006
9	ಎಸ್ ಚನ್ನಕೇಶವ, ದ್ವಿತಿಯ ದರ್ಜೆಸಹಾಯಕರು	25/08/1956 ಚಿಕ್ಕಮಗಳೂರು	20/01/1986	05–04–2006	ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯವೃತ್ತ ರವರ ಕಛೇರಿ	–	15/07/2011
10	ಸುಮಂಗಲ ಎಸ್. ಶಿದ್ರಾಮಶೆಟ್ಟಿ, ಬೆರಳಚ್ಚುಗಾರರು	20/06/1968 ಧಾರವಾಡ	20/01/2000	12–01–2000	ಬೆರಳಚ್ಚುಗಾರರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು,ಉತ್ತರ ವಲಯವೃತ್ತ, ರವರ ಕಛೇರಿ	–	01–07–2010
11	ಪಿ.ಲೋಕೇಶ ಜಾರಿಗಾರರು	28–03–1976 ಬೆಂಗಳೂರು	13–03–1997	06–03–1997	ಜಾರಿಗಾರರು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯವೃತ್ತ; ರವರ ಕಛೇರಿ	–	13–03–1997
12	ಮಹದೇವಯ್ಯ, ಡಿ ದರ್ಜೆ ನೌಕರರು	08/03/1966 ಮಂಡ್ಯ	06–05–1994	06–05–1994	ಡಿ ಗ್ರೂಪ್ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯವೃತ್ತ ರವರ ಕಛೇರಿ	–	08–10–2001

ಅನುಬಂಧ – 3

ದಿನಾಂಕ: 31–08–2011ಕ್ಕೆ ಅಧಿಕಾರಿ/ಸಿಬ್ಬಂದಿಗಳ ವೇತನ ಭತ್ಯೆಗಳ ವಿವರಗಳು

ಕ್ರಮಸಂಖ್ಯೆ	ಅಧಿಕಾರಿ ನೌಕರರ ಹೆಸರು	ಪದನಾಮ	ಗ್ರೂಪ್	ಲಿಂಗ	ವೇತನ ಶ್ರೇಣಿ	ವೇತನ	ಒಟ್ಟು ಸಂಬಳ
1	2	3	4	5	6	7	8
1	ಡಿ.ಪಾಂಡುರಂಗಪ್ಪ	ಸಹಕಾರ ಸಂಘಗಳ ಉಪನಿಬಂದಕರು,	ಎ	ಪುರುಷ	18150–26925	20550–00	38832–00
2	ಸಿದ್ದಗಂಗಪ್ಪ	ಸಹಕಾರ ಅಭಿವೃದ್ಧಿ ಅಧಿಕಾರಿ	ಬಿ	ಪುರುಷ	10800–20825	13000–00	24675–00
3	ಹೆಚ್.ಎಸ್. ಸೋಮಶೇಖರ್	ಸಹಕಾರ ಅಭಿವೃದ್ಧಿ ಅಧಿಕಾರಿ	ಬಿ	ಪುರುಷ	10800–20825	14800–00	28150–00
4	ಕೆ.ಗೋವಿಂದಸ್ವಾಮಿ	ಅಧೀಕ್ಷಕರು	ಸಿ	ಪುರುಷ	10000–18150	12300–00	23488–00
5	ಟಿ.ಜಯಶೇಖರ್	ಸ.ಸಂ.ಹಿರಿಯನಿರೀಕ್ಷಕರು	ಸಿ	ಪುರುಷ	8825–16000	10250–00	19569–00
6	ಎಂ.ಲಿಯಾಖತ್ ಆಲಿಖಾನ್ ಸ.ಸಂ.ಹಿರಿಯನಿರೀಕ್ಷಕರು	ಸ.ಸಂ.ಹಿರಿಯನಿರೀಕ್ಷಕರು	ಸಿ	ಪುರುಷ	8825–16000	8825–00	16897–00
7	ಆರ್.ದಿವ್ಯ,	ಸ.ಸಂ.ನಿರೀಕ್ಷಕರು	ಸಿ	ಸ್ತ್ರೀ	7275–13350	7800–00	14975–00
8	ಡಿಸಿ.ಗಣೇಶ್	ಸ.ಸಂ. ನಿರೀಕ್ಷಕರು	ಸಿ	ಪುರುಷ	7275–13350	7800–00	14975–00
9	ಟಿ.ಡಿ.ಉಮೇಶ್ ,	ಪ್ರಥಮ ದರ್ಜೆ ಸಹಾಯಕರು	ಸಿ	ಪುರುಷ	7275–13350	ಎಲ್.ಪಿ.ಸಿ.ಸ್ವೀಕೃತವಾಗಿಲ್ಲ	
10	ಸರಸ್ವತಿ ಎಲ್	ಪ್ರಥಮ ದರ್ಜೆ ಸಹಾಯಕರು	ಸಿ	ಸ್ತ್ರೀ	7275–13350	10250–00	19569–00
11	ಕೆ.ಮಹೇಶ್	ಪ್ರಥಮ ದರ್ಜೆ ಸಹಾಯಕರು	ಸಿ	ಪುರುಷ	7275–13350	7450–00	14169–00
12	ಎಸ್.ಎ.ಶೈಲಜ	ಹಿರಿಯಬೆರಳಚ್ಚುಗಾರರು	ಸಿ	ಸ್ತ್ರೀ	7275–13350	11460–00	21890–00
13	ಕೆ.ಚಂದ್ರಶೇಖರ,	ದ್ವಿತಿಯ ದರ್ಜೆ ಸಹಾಯಕರು	ಸಿ	ಪುರುಷ	5800–10500	7450–00	14244–00
14	ಎ.ಮುನಿಯಪ್ಪ,	ಡ್ರೈವರ್	ಸಿ	ಪುರುಷ	7275–13350	9050–00	17659–00

ಅನುಬಂಧ–4				
2010–11 ನೇ ಸಾಲಿನಲ್ಲಿ ಕಛೇರಿಯ ಯೋಜನೇತರ ವೆಚ್ಚ ವಿವರಗಳು				
1. ಸಹಕಾರ ಸಂಘಗಳ ಉಪ ನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಲೆಕ್ಕ ಶೀರ್ಷಿಕೆ: 2425–00–001–0–01				
1	ಯೋಜನೇತರ ಸಿಬ್ಬಂದಿ ವೆಚ್ಚ	2010–11ನೇ ಸಾಲಿನಲ್ಲಿ ಒಟ್ಟು ರೂ.		
		02 ಅಧಿಕಾರಿಗಳ ವೇತನ	262425	
		003–ಸಿಬ್ಬಂದಿ ವೇತನ	1553468	
		011–ತುಟ್ಟಿಭತ್ಯೆ	956244	
		014–ಇತರೆ ಭತ್ಯೆ	422527	
		ವೈದ್ಯಕೀಯ ಹಿಂಭರ್ತಿ	86340	
		ಒಟ್ಟು	3281004	
2	ಯೋಜನೇತರವೆಚ್ಚಗಳು ಟಿಎ,ಓಎ,ಆರ್.ಆರ್.ಟಿ	ಹಂಚಿಕೆ ರೂ.	ವೆಚ್ಚ ರೂ	ಉಳಿತಾಯ ರೂ.
	041–ಪ್ರಯಾಣವೆಚ್ಚ	29000	22727	6273
	051–ಸಾದಿಲ್ವಾರು ವೆಚ್ಚ	50000	50000	
	052–ದೂರವಾಣಿ ವೆಚ್ಚ	21000	17549	3451
	071–ಕಟ್ಟಡವೆಚ್ಚ	734000	733897	103
	195–ಸಾರಿಗೆ ವೆಚ್ಚ	91000	90605	395
	125–ಸಾಮಾನ್ಯವೆಚ್ಚ	4024	3918	106

ಅನುಬಂಧ–05ಎ 2010–11 ನೇ ಸಾಲಿಗೆ ರಾಜ್ಯ ಯೋಜನೆಯಡಿ ಪ್ರಗತಿ

ಕ್ರ.ಸಂ.	ವಿವರ	ಆಯವ್ಯಯ ಹಂಚಿಕೆ		ಪ್ರಗತಿ ಖರ್ಚು	
		ಭೌತಿಕ	ಆರ್ಥಿಕ	ಭೌತಕ	ಆರ್ಥಿಕ
1	2	3	4	5	6
	2010–11ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡದವರನ್ನು ಎಲ್ಲಾ ವಿಧವಾದ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ನೋಂದಾಯಿಸಲು ಸಹಾಯಧನ	1600 ಜನ	10.00	1110ಜನ	1.11ಲಕ್ಷ
2	2010–11ನೇ ಸಾಲಿಗೆ ಹಿಂದುಳಿದ ವರ್ಗದವರನ್ನು ಅಲ್ಪಸಂಖ್ಯಾಕರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿಸಲು ಸಹಾಯಧನ	1200ಜನ	3.00	550	1.55ಲಕ್ಷ
3	2010–11ನೇ ಸಾಲಿನಲ್ಲಿ ಪರಿಶಿಷ್ಠ ಜಾತಿ /ಪರಿಶಿಷ್ಟ ಪಂಗಡದ/ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಹಣಕಾಸು ಸಹಾಯಧನ (ಯಂತ್ರೋಪಕರಣ, ಕಂಪ್ಯೂಟರ್ ಖರೀದಿಗಾಗಿ)	2	1.00	1	0.86

ಅನುಬಂಧ–05ಬಿ 2010–11 ನೇ ಸಾಲಿಗೆ ಜಿಲ್ಲಾ ಯೋಜನೆಯಡಿ ಪ್ರಗತಿ

ಕ್ರ.ಸಂ.	ವಿವರ	ಆಯವ್ಯಯ ಹಂಚಿಕೆ		ಪ್ರಗತಿ ಖರ್ಚು	
		ಭೌತಿಕ	ಆರ್ಥಿಕ	ಭೌತಕ	ಆರ್ಥಿಕ
1	2	3	4	5	6
1	ಡಿ–1 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು	1	0.54	1	0.54
2	ಡಿ–2 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ (ಎನ್.ಸಿ.ಡಿ.ಸಿ)	2	0.20	2	0.20
3	ಡಿ–3 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಸಹಾಯ (ಸಾಮಾನ್ಯ ನಬಾರ್ಡ್ ೯) ಎನ್.ಸಿ.ಡಿ.ಸಿ	1	0.50	1	0.50
	ಒಟ್ಟು	4	1.24	4	1.24
	ತಾಲ್ಲೂಕು ಯೋಜನೆ 2010–2011				
	ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು ಡಿ–09	1	0.25	1	0.25

ಡಿ.ಪಾಂಡುರಂಗಪ್ಪ,
ಸಾರ್ವಜನಿಕ ಮಾಹಿತಿ ಅಧಿಕಾರಿ,
ಸಹಕಾರ ಸಂಘಗಳ ಉಪನಿಬಂಧಕರು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ

ಪಿ.ಆರ್. 1356

ಆರ್ಥಿಕ ಸಚಿವಾಲಯ

ಸಂಖ್ಯೆ:ಆಇ 77 ಆಖಇ 2011, ಬೆಂಗಳೂರು, ದಿನಾಂಕ:12-12-2011.

ಅಧಿಕೃತ ಜ್ಞಾಪನ

ವಿಷಯ: ದಿನಾಂಕ:01.01.2011ರಲ್ಲಿದ್ದಂತೆ ಖಜಾನೆ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಜಿಲ್ಲಾ ಖಜಾನಾಧಿಕಾರಿಗಳ ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪಕಟಿಸುವ ಬಗ್ಗೆ

ಉಲ್ಲೇಖ: ಅಧಿಕೃತ ಜ್ಞಾಪನ ಸಂಖ್ಯೆ: ಅಇ 77 ಆಖಇ 2011,ದಿ:28.05.2011

